# ಗುರುಭಕ್ತಿಸಾರ

ಗೌಣಭಕ್ತಿ, ಪರಭಕ್ತಿಗಳ ಸ್ವರೂಪವನ್ನು ತಿಳಿಸುವ ಷಟ್ಪದೀಗ್ರಂಥ.
ಶಬ್ದಾರ್ಥ ಮತ್ತು ಭಾವಾರ್ಥ-ಇವುಗಳಿಂದ ಕೂಡಿದ್ದು.

ಲೇಖಕ :

ಭಗವಚ್ಚರಣಸ್ತೋತ್ರವಿವರಣೆ, ಹರಿಶರಣಾಷ್ಟಕವಿವರಣೆ, ನಾರದಭಕ್ತಿಸೂತ್ರವಿವರಣೆ-
ಮುಂತಾದ ಸಾಧನಪ್ರಧಾನವಾದ ಗ್ರಂಥಗಳನ್ನು ಬರೆದಿರುವ

**ವೈ. ಸುಬ್ಬರಾವ್**

(ಶ್ರೀಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಪೂರ್ವಾಶ್ರಮದ ಹೆಸರು)

ಕ್ರಮಾಂಕ ೩೪

ಪ್ರಕಾಶಕರು :

**ಅಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ - 573 211

2000

# ವಿಷಯಾನುಕ್ರಮಣಿಕೆ


| | ಪದ್ಯಗಳು |
|---|---|
| ಅವತರಣಿಕೆ .. .. .. | ೧-೬ |
| ಕಾಮಕ್ರೋಧಾದಿಗಳ ತ್ಯಾಗ .. .. .. | ೭-೧೭ |
| ದುರ್ಜನಸಂಗತ್ಯಾಗ .. .. .. | ೧೮ |
| ನಿಷಿದ್ಧಕರ್ಮತ್ಯಾಗ .. .. .. | ೧೯-೨೦ |
| ಶುಭವಾಸನೆ .. .. .. | ೨೧-೨೬ |
| ದೇಹಾಭಿಮಾನತ್ಯಾಗ . .. .. | ೨೭-೨೯ |
| ನಾಸ್ತಿಕ್ಯವರ್ಜನ .. .. .. | ೩೦ |
| ವೈರಾಗ್ಯ .. .. .. | ೩೧-೩೨ |
| ಧರ್ಮಧ್ವಜಿತ್ವತ್ಯಾಗ .. .. .. | ೩೩-೪೦ |
| ಏಕನಿಷ್ಠೆ .. .. .. | ೪೧-೪೬ |
| ಶಾಸ್ತ್ರವಾಸನಾತ್ಯಾಗ-ಸತ್ಸಹವಾಸ .. .. .. | ೪೭-೫೩ |
| ಭಕ್ತಿಯಲ್ಲಿ ತ್ವರೆ .. .. .. | ೫೪-೫೫ |
| ಕರ್ಮವನ್ನು ಈಶ್ವರಾರ್ಪಣೆ ಮಾಡುವದು .. .. .. | ೫೬-೫೮ |
| ಕಾಮಾದಿಗಳ ವಿನಿಯೋಗ .. .. .. | ೫೯ |
| ಇತರ ಸಾಧನಗಳಲ್ಲಿ ಔದಾಸೀನ್ಯ .. .. .. | ೬೦-೬೩ |
| ಭಜನೆಯ ಕ್ರಮ .. .. .. | ೬೪-೬೮ |
| ಸಾಕಾರಧ್ಯಾನ .. .. .. | ೬೯-೭೨ |
| ಆಕಾರದಲ್ಲಿ ಸೂಚಿತವಾಗುವ ಗುಣಕರ್ಮಗಳು .. .. | ೭೩-೮೦ |
| ಒಬ್ಬ ಈಶ್ವರನಿಗೇ ಬಗೆಬಗೆಯ ರೂಪಗಳು .. .. .. | ೮೧-೮೯ |
| ಮಾನಸಪೂಜೆ .. .. .. | ೯೦-೯೩ |
| ಭಕ್ತನ ಸಾತ್ತ್ವಿಕಭಾವಗಳು .. .. .. | ೯೪-೯೫ |
| ಭಕ್ತಿಯಿಂದ ಮನೋಲಯ .. .. .. | ೯೬-೯೭ |
| ಶಿವಗುರುಗಳಿಗೆ ಅಭೇದವೆಂಬ ದೃಷ್ಟಿಯಿಂದ ಮಾಡುವ ಸ್ತುತಿ | ೯೮-೧೨೮ |

|| ಓಂ ||

ಶ್ರೀ ಗುರುಭ್ಯೋ ನಮಃ

# ಗುರುಭಕ್ತಿಸಾರ

## (ಕುಸುಮ ಷಟ್ಪದಿ)

ಶ್ರೀಗುರುವೆ ಸಕಲ ನಿಗ । ಮಾಗಮಪ್ರತಿಪಾದ್ಯ ।
ವಾಗಗೋಚರ ವಿನುತ ಶಂಕರಾಖ್ಯ ॥
ಈಗಳೆನ್ನೆದೆಯೊಳಗೆ । ರಾಗದಿಂ ಮನೆಮಾಡಿ ।
ಬೇಗದಿಂ ಧನ್ಯನೆಂದೆನಿಸು ದೇವ ॥ ೧ ॥

೧. ನಿಗಮಾಗಮಪ್ರತಿಪಾದ್ಯ - ವೇದಶಾಸ್ತ್ರಗಳಿಂದ ಹೊಗಳಿಸಿ ಕೊಳ್ಳುವವ ; ವಾಗಗೋಚರ - ಮಾತಿಗೆ ಸಿಕ್ಕದ ರೂಪವುಳ್ಳವ ; ಎದೆ - ಹೃದಯ; ರಾಗದಿಂ - ಪ್ರೇಮದಿಂದ.

ಈ ಪದ್ಯದಲ್ಲಿ ಗುರುವಿಗೆ ಕೊಟ್ಟಿರುವ ವಿಶೇಷಣಗಳು ಪರಮಾತ್ಮನಿಗೂ ಹೊಂದುತ್ತವೆ.

ಮಂಗಲಂಗಳಿಗೆಲ್ಲ । ಮಂಗಲನು ನೀನೆಂದು ।
ಓಂಗದುಲಿವುದು ವೇದಶಾಸ್ತ್ರವೆಲ್ಲ ॥
ಕಂಗೆಡಿಸಿ ವಿಘ್ನನಿವ । ಹಂಗಳನು ನಿನ್ನ ನೆನ ।
ಹಿಂಗೊಲಿಸುತೆನ್ನ ಕಾಪಿಡು ಕರುಣದಿ ॥ ೨ ॥

೨. ಹಿಂಗದೆ-ಬಿಡದೆ : ಉಲಿವುದು - ಸಾರಿ ಹೇಳುತ್ತದೆ ; ನೆನ ಹಿಂಗೆ + ಒಲಿಸುತ - ಸ್ಮರಣೆಯಲ್ಲಿ ಪ್ರೀತಿಯಿಡುವಂತೆ ಮಾಡಿ

ಗಣಪತಿಯ ನಿರ್ವಿಘ್ನ । ದಣಿಗೆ, ಸರಸತಿಯ ಮ ।
ತ್ತಿನಿದು ಮಾತುಗಳೊಂದಿಕೆಗೆ, ಸಿರಿಯನು ॥
ಧನಕೆಂದು ಜಾನಿಸುವ । ಬಿನುಗು ಬುದ್ಧಿಯನೊಲ್ಲೆ ।
ನೆಣೆಸೆ ಗುರುವಿಂ ಪೆರತು ದೈವಮುಂಟೆ ? ॥ ೩ ॥

೩. ಇನಿದು - ಸವಿಯಾದ ; ಒಂದಿಕೆಗೆ - ಜೋಡಣೆಗೆ ; ಜಾನಿಸುವ - ಧ್ಯಾನಿಸುವ ; ಬಿನುಗು - ಕೀಳು ; ಪೆರತು - ಬೇರೆ.

ಗುರುವು ಸಕಲದೇವತಾಸ್ವರೂಪನಾದ್ದರಿಂದ ಸಕಲೇಷ್ಟಾರ್ಥಗಳೂ ಅವನ ಧ್ಯಾನದಿಂದಲೇ ಕೈಗೂಡುವವು.

ವೇದಶಾಸ್ತ್ರಗಳೆಲ್ಲ । ವಾದರದಿನರಸುತಿಹ ।
ಗಾಧವಲ್ಲದ ತತ್ತ್ವದಿರಿಕೆಯನ್ನು ॥
ಬೋಧಿಸುತಲೆನ್ನ ಸ । ರ್ವಾಧಿಗಳ ಕಳೆದುಳಿಸಿ ।
ದಾ ದಯಾನಿಧಿಯ ಬಲಗೊಂಬೆನಿಂದು ॥ ೪ ॥

೪. ಆದರದಿಂ + ಅರಸುತ + ಇಹ - ಬೇಕೆಂದು ಹುಡುಕುತ್ತಿರುವ; ಗಾಧವಲ್ಲದ - ಅಳೆಯುವದಕ್ಕಾಗದಷ್ಟು ಆಳದ ; ತಿಳಿಯುವದಕ್ಕೆ ಕಷ್ಟವಾದ ; ಇರಿಕೆ - ಸ್ವರೂಪ ; ಸರ್ವಾಧಿಗಳ - ಎಲ್ಲಾ ಮನೋವ್ಯಥೆಗಳನ್ನೂ,

ಹುಟ್ಟು ಹೊಂದುಗಳ ಬಿ । ಕ್ಕಟ್ಟಿನಲಿ ಸಿಲ್ಕಿರ್ದ ।
ಕಷ್ಟಸಂಸಾರಚಕ್ರದ ಸುತ್ತಿನ ॥
ಬಟ್ಟೆಯತ್ತಣಿನೆನ್ನ । ನೆಟ್ಟನೆಳೆದೆತ್ತಿ ಮು ।
ದ್ದಿಟ್ಟು ಸಲಹಿದ ಸದಯನೆನಗೆ ಶರಣು ॥ ೫ ॥

೫. ಹೊಂದು-ಸಾವು ; ಕಷ್ಟಸಂಸಾರಚಕ್ರದ- ಕಷ್ಟವಾದ ಸಂಸಾರವೆಂಬ ಚಕ್ರದ ; ಬಟ್ಟೆಯತ್ತಣಿಂ - ದಾರಿಯಿಂದ.

ಸಂಸಾರದಲ್ಲಿ ಹುಟ್ಟಿಸಾಯುತ್ತಾ ತೊಳಲುವದು ಗುರುವಿನ ಕೃಪೆಯಿಂದ ತಪ್ಪಿಹೋಗುತ್ತದೆ.

ಬಿಚ್ಚಿ ಬಯಕೆಯ ಗಂಟ । ಕೊಚ್ಚಿ ಸಂದೇಹಗಳ ।
ನೊಚ್ಚತದಿ ಕರ್ಮಗಳ ನೀಡಾಡುವ ॥
ಅಚ್ಚಮತಿಯಿತ್ತೆನ್ನ । ನೆಚ್ಚರಿಸಿ ಕೃಪೆಗೈದ ।
ಸಚ್ಚರಿತನಡಿದಾವರೆಯ ನೆನೆವೆನು ॥ ೬ ॥

೬. ಬಯಕೆಯ ಗಂಟ-ಕಾಮಗ್ರಂಥಿಯನ್ನು, ಬಲವಾಗಿರುವ ಕಾಮವನ್ನು ; ಒಚ್ಚತದಿ -ಪೂರ್ಣವಾಗಿ ; ಈಡಾಡುವ - ನಾಶಪಡಿಸುವ ; ಅಚ್ಚಮತಿ - ಶುದ್ಧಜ್ಞಾನ.

ತತ್ತ್ವಜ್ಞಾನದಿಂದ ಕಾಮಗಳೆಲ್ಲ ತೊಲಗಿ, ಎಲ್ಲಾ ಸಂಶಯಗಳೂ ಹೋಗಿ, ಸಂಸಾರಕ್ಕೆ ಕಾರಣವಾಗಿರುವ ಕರ್ಮಗಳ ತೊಡಕೂ ತಪ್ಪುವದೆಂದು ಶ್ರುತಿಯಲ್ಲಿದೆ. ಇಂಥ ಜ್ಞಾನವು ಗುರುವಿನಿಂದಲೇ ದೊರಕುವದೆಂದು ಭಾವ.

ಇರಿವ ಕಾಮಕ್ರೋಧ । ದುರಿಯ ಮದಮೋಹಮ ।
ತ್ಸರಲೋಭಗಳ ಬಿಡದ ಬಲುಬೇಗೆಯ ॥
ಮರೆಸಿ ಶಮದಮಮುಖ್ಯ । ನಿರತಿಶಯದರುಗುಣವ ।
ಕರುಣಿಸಿದ ಗುರುರಾಯನಡಿಗೆರಗುವೆ ॥ ೭ ॥

೭. ಇರಿ - ಸುಡು ; ಬೇಗೆ - ತಾಪ ; ಅರುಗುಣವ - ಶಮ, ದಮ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ - ಎಂಬ ಆರು ಸಾಧನಗಳನ್ನು.

ಕಾಮ, ಕ್ರೋಧ- ಮುಂತಾದವು **ಅರಿಷಡ್ವರ್ಗ**ವೆನಿಸುವವು. ನಮಗೆ ಶತ್ರುಗಳಂತೆ ಇರುವ ಇವುಗಳನ್ನು ಗೆಲ್ಲುವದಕ್ಕೆ ಶಮಾದಿಗಳು ಬೇಕು.

ಕಣ್ಣುಕಿವಿಮೂಗುಬಾ । ಯುಣ್ಣಿಸುವ ಸೊಗವನಿದ ।
ನೆಣ್ಣದಿರು ನಿತ್ಯನಿರ್ದೋಷವೆಂದು ॥
ಬಣ್ಣವಳಿವುದಿದೆಲ್ಲ । ಹುಣ್ಣು ತಿನಿಸೆಂದರಿಯೆ ।
ನಿರ್ಣಯಿಸಿದಗೆ ನಿತ್ಯವಾನೆರಗುವೆ ॥ ೮ ॥

೮. ಉಣ್ಣಿಸುವ ಸೊಗ-ಕೊಡುವ ಭೋಗದ ಸುಖ ; ಎಣ್ಣದಿರು -

ಎಣಿಸಬೇಡ ; ಬಣ್ಣವಳಿವುದು - ಸಪ್ಪೆಯಾಗುವದು ; ಹುಣ್ಣ ತಿನಿಸು - ಕಜ್ಜಿಯ ನವೆಯಂತಿರುವದು ; ಅರಿಯೆ - ತಿಳಿಯುವ ಹಾಗೆ.

ಕಜ್ಜಿಯ ನವೆಯು ಕೆರೆಯುವಾಗ ಸುಖವನ್ನು ಕೊಡುವಂತೆ ಇದ್ದು ಕೊನೆಗೆ ದುಃಖವನ್ನೇ ಕೊಡುವಂತೆ ಇಂದ್ರಿಯಗಳು ಬಲವಾಗಿರುವಾಗ ಮಾತ್ರ ವಿಷಯಸುಖವು ಹಿತವಾಗಿ ತೋರಿದರೂ ಇಂದ್ರಿಯಬಲವು ಕುಗ್ಗಿದಹಾಗೆಲ್ಲ ಸಪೆಯಾಗುತಾ ಹೋಗುವದು.

ಕೂಡೆ ವಿಷಯೇಂದ್ರಿಯವು । ನಾಡೆ ತೋರುವ ಸುಖವ ।
ನಾಡಾಡಿಗಳು ಬಯಸಿ ಬೆಂಡಪ್ಪರು ॥
ಬೇಡಿದರ ಗೊಡವೆ ತಡ । ಮಾಡದಿರು ಭಕ್ತಿಯಲಿ ।
ಕೂಡು ಶಿವಸುಖವನೆಂದಂಗೆ ಮಣಿವೆ ॥ ೯ ॥

೯. ನಾಡೆ- ಚೆನ್ನಾಗಿ ; ನಾಡಾಡಿ - ಸಾಮಾನ್ಯಜನ ಬೇಡ + ಇದರ + ಗೊಡವೆ ; ಶಿವಸುಖ- ಉತ್ತಮವಾದ ನಿತ್ಯಸುಖ, ಮುಕ್ತಿ.

ಈ ವಿಷಯೇಂದ್ರಿಯಗಳಿಂದಾಗುವ [illegible] ಅನಿತ್ಯವೂ ಕೊನೆಯಲ್ಲಿ ದುಃಖಕರವೂ ಆಗಿರುವದು.

ನಾರಿಯರ ರೂಪಿಂಗೆ । ಸೂರೆಗೊಡದಿರು ಮನವ ।
ತೋರುವಡಗೆಲು ಕೊಬ್ಬು ತೊವಲು ರಕ್ತ ॥
ಬೇರೆಬೇರಿವನು ನೋ । ಡಾರಯ್ಯುತೆಂದು ನಿಜ ।
ದೋರಿದನ ಪದಕಮಲಕಿರದೆರಗುವೆ ॥ ೧೦ ॥

೧೦. ಅಡಗು - ಮಾಂಸ ; ಎಲು-ಎಲುಬು ; ತೊವಲು-ಚರ್ಮ ; ಆರಯ್ಯುತ - ವಿಚಾರಮಾಡಿ ; ನಿಜದೋರಿದನ - ನಿಜವಾದ ಸ್ಥಿತಿಯನ್ನು ತೋರಿಸಿಕೊಟ್ಟವನ.

ತನುಮನಧನಪ್ರಾಣ । ವಿನಿತೆಲ್ಲ ಸಂಶಯಕೆ ।
ಮನೆಯಪ್ಪುವೀ ಕಾಮವಿಕೃತಿಯಿಂದ ॥

ಕನಸಿನಂದವು ಸುಖವು । ಕೊನೆಗೆಲ್ಲ ವಿರಸವಹು ।
ದೆನುತ ತೋರಿಸಿದ ನಿರ್ಮಮನ ನಮಿಪೆ ॥ ೧೧ ॥

೧೧. ಸಂಶಯಕೆ ಮನೆಯಪ್ಪುವು - ಇರುತ್ತವೆಯೋ ಇಲ್ಲವೋ ಎಂಬ ಸಂಶಯಕ್ಕೆ ಆಸ್ಪದವಾಗುವವು, ಹಾಳಾಗುವವು ; ಕೊನೆಗೆಲ್ಲ ವಿರಸವಹುದು - ಮೊದಲು ಸವಿಯಾಗಿ ತೋರಿದರೂ ದುಃಖದಲ್ಲಿ ಕೊನೆಗಾಣುವದು.

ಓಸರಿಸೆ ಭೋಗವಳಿ । ಯಾಸೆ ತೀರುವುದೆಂದು ।
ಮೋಸಹೋಗದಿರಗ್ನಿಯುರಿಯ ಮೇಲೆ ॥
ಕಾಸಿರ್ದ ತುಪ್ಪವನು । ನೀ ಸುರಿಯಲಣಗುವುದೆ ?
ಹೇಸು ಭೋಗಕ್ಕೆಂದನಡಿವಿಡಿವೆನು ॥ ೧೨ ॥

೧೨. ಓಸರಿಸೆ- ಒಂದೇ ಕಡೆಗೆ ಬರಲು, ಹೆಚ್ಚಾಗಲು ; ಅಳಿಯಾಸೆ- ಕೆಟ್ಟಬಯಕೆ ; ಅಣಗುವದೆ- ಆರಿಹೋಗುತ್ತದೆಯೆ ? ಹೇಸು- ಅಸಹ್ಯಪಡು.

'ವಿಷಯಗಳನ್ನು ಅನುಭವಿಸಿದರೆ ಕಾಮವು ಶಾಂತಿಯಾಗುವದಿಲ್ಲ ; ಬೆಂಕಿಯ ಮೇಲೆ ತುಪ್ಪವನ್ನು ಹಾಕಿದರೆ ಅದು ಮತ್ತೂ ಹೆಚ್ಚಾಗಿ ಉರಿಯುವಂತೆ ವಿಷಯೋಪಭೋಗದಿಂದ ಆಸೆಯು ಮತ್ತೂ ಹೆಚ್ಚಾಗುವದು' ಎಂದು ಸ್ಮೃತಿಯಲ್ಲಿದೆ.

ಸಿಟ್ಟೆಂಬ ಹೊಲೆಯ ನೀ । ಕಿಟ್ಟವಿಡದಿರು ನರಕ ।
ಕಟ್ಟಿದೂಡುವ ಕೆಟ್ಟ ಕಾರ್ಯಕೆಲ್ಲ ॥
ಸಿಟ್ಟೆ ತವರಹುದು ಮನ । ಮುಟ್ಟೆ ನೋಡೆಂದ ನಡಿ ।
ಗಿಟ್ಟು ಹಣೆಯನು ಸತತ ಶಾಂತಿದಳೆವೆ ॥ ೧೩ ॥

೧೩. ಕಿಟ್ಟವಿಡದಿರು- ಮುಟ್ಟುವದಕ್ಕೆ ಬಿಡಬೇಡ ; ನರಕಕಟ್ಟ - ನರಕಕೆ + ಅಟ್ಟಿ ; ತವರು ಮೂಲಕಾರಣ ; ಮನಮುಟ್ಟೆ ನೋಡು - ಚೆನ್ನಾಗಿ ಯೋಚಿಸಿ ನೋಡು.

ಸಿಟ್ಟು ಅನೇಕವಾದ ಅನರ್ಥಗಳನ್ನುಂಟುಮಾಡುವ ಪಾಪಗಳನ್ನು ಮಾಡಿಸುವದು. ಆದ್ದರಿಂದ ಅಶುಚಿಯಾದ ವಸ್ತುವನ್ನು ಮುಟ್ಟದೆ ದೂರ ದಲ್ಲಿಯೇ ಬಿಟ್ಟು ಬಿಡುವಂತೆ ಇದನ್ನು ದೂರಮಾಡಬೇಕು.

**ಧನದ ಮದ ಕುಲದ ಮದ । ಜನಿಸಿದನ್ವಯದ ಮದ ।**
**ಘನವಿದ್ಯೆ ರೂಪು ಯವ್ವನದ ಮದವು ॥**
**ಅನುತಾಪದೊಳಗೆಲ್ಲ । ಕೊನೆಯಪ್ಪುವೀ ಮದಗ ।**
**ಳನು ತಿರುಹು ದಮದಿನೆಂದನ ವಂದಿಪೆ ॥ ೧೪ ॥**

೧೪. ಅನ್ವಯ - ವಂಶ.

ಮದವನ್ನು ದಮದಿಂದ ಗೆಲ್ಲಬೇಕು. 'ಮದ' ಎಂಬ ಮಾತನ್ನು ತಿರುಗಿಸಿ ಓದಿದರೆ 'ದಮ'ವೆಂದಾಗುವದು ; ಇದರಂತೆ ಮದಗಳನು ಹಿಂತಿರುಗಿಸಿದರೆ ದಮವೆಂಬ ಸದ್ಗುಣವಾಗುವದು.

**ಸಂಕಲ್ಪಮೂಲದಿಂ । ದಂಕುರಿಸುವದು ಕಾಮ ।**
**ಮಂಕು ಮೋಹಕ್ಕೆಲ್ಲ ತಾಯಿಬೇರು ॥**
**ಮಂಕು ಸುವಿವೇಕವನು । ಸೋಂಕೆ ಸೊರಗುವದೆಂದ ।**
**ಶಂಕರನ ನೆಡೆವಿಡದೆ ಸೇವಿಸುವೆನು ॥ ೧೫॥**

೧೫. ಮಂಕು- ಅಜ್ಞಾನ ತಾಯಿಬೇರು - ಮುಖ್ಯಕಾರಣ ಶಂಕರ- ಮಂಗಳಕರನಾದ ಗುರು.

ಅಜ್ಞಾನದಿಂದ ಸಂಕಲ್ಪವೂ ಕಾಮವೂ ಪ್ರವೃತ್ತಿಯೂ ಉಂಟಾಗುವವು. ಅಜ್ಞಾನವು ವಿವೇಕದಿಂದ ನಾಶವಾಗುತ್ತದೆ ; ಆಮೇಲೆ ಕಾಮವುಂಟಾಗುವ ದಿಲ್ಲ.

**ಹೆಚ್ಚಿನೈಸಿರಿ ವಿದ್ಯೆ। ಸಚ್ಚರಿತೆಯಾರೋಗ್ಯ ।**
**ಮೆಚ್ಚಿಕೆಯ ಹೊಲಮನೆಯು ಪೆರರಿಗಿರಲು ॥**

**ಮಚ್ಚರಿಸದಿರು ಪಡೆದು । ದಚ್ಚಳಿಯದೆರಗುವದು ।**

**ನಿಚ್ಚವೆಂದನ ಕಾಲ ಕಚ್ಚ ಕುಡಿವೆ** ॥ ೧೬ ॥

೧೬. ಸಚ್ಚರಿತೆ-ಒಳ್ಳೆಯ ನಡತೆ ಪೆರರಿಗೆ - ಮತ್ತೊಬ್ಬರಿಗೆ ; ಮಚ್ಚರಿಸದಿರು-ಹೊಟ್ಟೆಕಿಚ್ಚು ಪಡಬೇಡ ಅಚ್ಚಳಿಯದೆ - ಮುಕ್ಕಾಗದೆ, ಪೂರ; ಎರಗುವದು - ಬಂದು ಸೇರುವದು ; ನಿಚ್ಚ - ನಿತ್ಯ , ಕಾಲ ಕಚ್ಚ - ಕಾಲುತೊಳೆದ ನೀರನ್ನು, ಪಾದತೀರ್ಥವನ್ನು.

ತಾನು ಪಡೆದದ್ದು ತನಗೆ ಅವಶ್ಯವಾಗಿ ಬರುವದು. ಕರ್ಮಾನು ಸಾರವಾಗಿ ಫಲವಾಗುವದರಿಂದ ಮತ್ತೊಬ್ಬರಲ್ಲಿರುವ ಹೆಚ್ಚಿಗೆಯನ್ನು ನೋಡಿ ಹೊಟ್ಟೆಕಿಚ್ಚು ಪಡುವದರಿಂದ ಏನೂ ಪ್ರಯೋಜನವಿಲ್ಲ.

**ಕರುಬದಿರು ಕಂಡು ಪರ । ಸಿರಿಯ, ಸರಿಗೆಳೆಯರೊಳು ।**

**ಬರಿದೆ ಹಗೆಯನು ಮಾಡದಿರು, ಕಿರಿಯರ ॥**

**ಕೊರಗಿಸದಿರೆಂದು ದು । ಶ್ಚರಿತವನೆ ಕಡುಘೋರ ।**

**ನರಕವೆನಿಸಿದ ಗುರುವಿನಡಿಗೆರಗುವೆ** ॥ ೧೭ ॥

೧೭. ಕರುಬದಿರು-ಹೊಟ್ಟೆಕಿಚ್ಚು ಪಡಬೇಡ ಸರಿಗೆಳೆಯರು-ಜತೆಯ ಸ್ನೇಹಿತರು ; ಬರಿದೆ-ಸುಮ್ಮನೆ ; ಕಿರಿಯರ ಕೊರಗಿಸದಿರು-ಕಿರಿಯವರನ್ನು ಗೋಳಾಡಿಸಬೇಡ ; ಕಡು ಘೋರನರಕವೆನಿಸಿದ - ಬಹಳ ಭಯಂಕರವಾದ ನರಕವೆಂದು ತಿಳಿಯುವಂತೆ ಮಾಡಿದ.

**ಕೇಡಿಗರ ಕುಟಿಲರೊಡ । ನಾಡದಿರು ವಂಚಕರ ।**

**ಚಾಡಿಕೋರರ ಜಾರಚೋರರುಗಳ ॥**

**ನೋಡದಿರು ಕರೆದು ಮಾ । ತಾಡದಿರು, ದುರಿತವನು ।**

**ದೂಡೆನುತ ಪೇಳ್ದವನ ದೂದೆಸಗುವೆ** ॥ ೧೮ ॥

೧೮. ಕುಟಿಲರ-ಸರಳವಾದ ಮಾರ್ಗದಲ್ಲಿ ನಡೆಯದವರು ; ದುರಿತವನು ದೂಡು-ಪಾಪವನ್ನು ತಳ್ಳಿಹಾಕು ; ದೂದೆಸಗುವೆ - ದೌತ್ಯವನ್ನು ಮಾಡುವೆನು, ಸೇವಿಸುತ್ತೇನೆ.

ಪರರ ಹಿಂಸೆಗೆ ಮನಃ । ಕರಣವಾಕ್ಯದೆ ಬೆದರು ।
ತಿರು ಜನರ ಸಂತೋಷಕೆಳಸು ನಿತ್ಯ ॥
ಪರನಿಂದೆ ಪಿಸುಣು ಕವ। ಡರಿಯದಿರು ನಿಜದಿನಿದೆ ।
ಹರಪೂಜೆಯೆಂದನಡಿಗೀಗ ಮಣಿವೆ ॥ ೧೯ ॥

೧೯. ಮನಃಕರಣವಾಕ್ಯದೆ-ತ್ರಿಕರಣದಲ್ಲಿಯೂ ; ಎಳಸು-ಯತ್ನಿಸು; ಪಿಸುಣು-ಚಾಡಿ ; ಕವಡು - ಕವಟ ; ಮಣಿವೆ - ನಮಸ್ಕರಿಸುತ್ತೇನೆ.

ಜಾತಿಕುಲಗೋತ್ರಗಳಿ । ಗೋತು ಪಾಪವ ನೆಸಗ ।
ದಾತುಮದ ಶುದ್ಧಿಯನೆ ಬಯಸು ನಿತ್ಯ ॥
ನೀತಿಯಿದೆ ಮೆಚ್ಚು ಸರ್ವಾತುಮಗೆ ತಿಳಿಯೆಂದು ।
ರೀತಿಗಲಿಸಿದ ಮಹಾತುಮಗೆರಗುವೆ ॥ ೨೦ ॥

೨೦. ಓತು-ಪ್ರೀತಿಸಿ, ಅಭಿಮಾನದಿಂದ ; ಆತುಮದ - ಚಿತ್ತದ ; ಸರ್ವಾತುಮಗೆ ನೀತಿ + ಇದೆ ಮೆಚ್ಚು - ಸರ್ವಾತ್ಮನಾದ ಈಶ್ವರನಿಗೆ ಈ ನಡತೆಯೇ ಒಪ್ಪಾಗಿರುವದು.

ಜಾತಿ, ಕುಲ, ಗೋತ್ರ- ಮುಂತಾದವುಗಳ ಹೆಮ್ಮೆಯಿಂದ ಪಾಪವನ್ನು ಮಾಡುವದಕ್ಕೆ ಕಾರಣವಾಗದಂತೆ ನೋಡಿಕೊಳ್ಳಬೇಕು.

ಸತ್ಯವಿಡಿ ಋಜುಭಾವ । ನಿತ್ಯಪರನಾಗು ಧರೆ ।
ಗತ್ಯಧಿಕಹಿತನೆನಿಸಿ ನಿರುತ ಬಾಳು ॥
ಸತ್ಯಚಿದ್ಘನಶಿವಗೆ । ನಿತ್ಯವದು ಮೆಚ್ಚೆಂದ ।
ಗತ್ಯಮಲಭಕ್ತಿಯೊಳು ತಲೆವಾಗುವೆ ॥ ೨೧ ॥

೨೧. ಸತ್ಯವಿಡಿ - ಸತ್ಯವನ್ನೇ ಹಿಡಿ ; ಋಜುಭಾವನಿತ್ಯಪರನಾಗು - ಸರಳತನದಲ್ಲಿಯೇ ಯಾವಾಗಲೂ ಮನಸ್ಸಿಡು ; ಸತ್ಯಚಿದ್ಘನಶಿವಗೆ - ಸತ್ಯರೂಪನಾಗಿಯೂ ಜ್ಞಾನಮಾತ್ರಸ್ವರೂಪನಾಗಿಯೂ ಇರುವ ಶಿವನಿಗೆ ; ಎಂದಗೆ - ಎಂದು ಉಪದೇಶಿಸಿದ ಗುರುವಿಗೆ; ಅತ್ಯಮಲಭಕ್ತಿಯೊಳು- ಅತಿಶುದ್ಧವಾದ ಭಕ್ತಿಯಿಂದ.

ಗುಣದೋಷಗಳ ಪೆರರೊ । ಳೆಣಿಸದಿರು ಕಂಡಲ್ಲಿ ।
ಗುಣವನಾರಿಸೆ ಮನವನಣಿಯ ಮಾಡು ॥
ಹಣೆಗಣ್ಣನಮಿತಗುಣ । ಗಣವ ನೆನೆಯೆಂದ ಸ ।
ದ್ಗುಣಿಯ ಚರಣಕ್ಕೆನ್ನ ಪಣೆಯೊಂದಿಪೆ ॥ ೨೨ ॥

೨೨. ಆರಿಸೆ-ಆರಿಸಿ ತೆಗೆದುಕೊಳ್ಳುವದಕ್ಕೆ ಅಣಿಯ ಮಾಡು - ಸಿದ್ಧಪಡಿಸು; ಹಣೆಗಣ್ಣ - ಶಿವ ಪಣೆಯೊಂದಿಪೆ - ಹಣೆ ಇಟ್ಟು ನಮಸ್ಕರಿಸುತ್ತೇನೆ.

ಈಶ್ವರನ ಸದ್ಗುಣಗಳನ್ನು ನೆನೆಸಿಕೊಳ್ಳುತ್ತಾ ಇದ್ದರೆ ಮತ್ತೊಬ್ಬರಲ್ಲಿ ದೋಷವನ್ನು ಎತ್ತೆಣಿಸುವ ಕುಬುದ್ಧಿಯುಂಟಾಗುವದಿಲ್ಲ.

ಕರುಣೆಯನು ಕಿರಿಯರೊಳು । ಹಿರಿಯರೊಳು ಮುದಿತೆಯನು ।
ಸರಿಗರಲಿ ಸಮಮೈತ್ರಿಯನು ಬಳೆಸುತ ॥
ಬರಿಯುಪೇಕ್ಷೆಯ ಪಾಪಿ । ನರರಲ್ಲಿ ತೋರಿಸೆಂ ।
ದೊರೆದನುರುಬೋಧೆಯನು ನಿರುತ ನೆನೆವೆ ॥ ೨೩ ॥

೨೩. ಮುದಿತೆ - ಹೆಚ್ಚಿಗೆಯನ್ನು ಕಂಡು ಸಂತೋಷಪಡುವದು ; ಸರಿಗ - ಸಮಾನ ; ಒರೆದನ- ಹೇಳಿದವನ.

ಕರುಣೆ, ಮುದಿತೆ, ಮೈತ್ರಿ,, ಉಪೇಕ್ಷೆ - ಈ ಶುಭವಾಸನೆಗಳನ್ನು ಬೆಳಸಬೇಕು. ಈ ವಾಸನೆಗಳಿಂದ ೧೭ನೆಯ ಪದ್ಯದಲ್ಲಿ ಹೇಳಿದ ಅಶುಭವಾಸನೆಗಳು ಕುಗ್ಗುತ್ತವೆ.

ತನ್ನಂತೆ ಭೂತಂಗ । ಳನ್ನು ಕಾಂಬುದು ಧರ್ಮ ।
ದುನತಿಕೆಯೆಂಬ ಮೋಹವನು ಕಳೆದು ॥
ತನ್ನ ತನುಮನಧನಗ । ಳೆನ್ನುಳಿದರೂಳಿಗ ।
ಕ್ಕೆನ್ನಿಸಿದ ದೇಶಿಕನ ದೆಸೆಗೆರಗುವೆ ॥ ೨೪ ॥

೨೪. ಭೂತಂಗಳನ್ನು - ಉಳಿದ ಪ್ರಾಣಿಗಳನ್ನು ಉನ್ನತಿಕೆ -

ಅತಿಶಯ ; ಇನ್ನುಳಿದರ - ಬೇರೆ ಇರುವವರ ; ಊಳಿಗಕ್ಕೆ - ಸೇವೆಗೆ ; ಎನ್ನಿಸಿದ - ಎಂಬ ತಿಳಿವಳಿಕೆಯನ್ನು ಕೊಟ್ಟ. ದೇಶಿಕನ = ಗುರುವಿನ ; ದೆಸೆಗೆ - ದಿಕ್ಕಿಗೆ.

ತನ್ನಂತೆ ಮಿಕ್ಕ ಎಲ್ಲಾ ಪ್ರಾಣಿಗಳನ್ನೂ ಕಂಡಮಾತ್ರದಿಂದ ನೀತಿಯ ಕೊನೆಯ ಮೆಟ್ಟಿಲನ್ನು ಹತ್ತಿದಂತೆ ಆಗುವದಿಲ್ಲ ; ತನ್ನ ಸರ್ವಸ್ವವನ್ನೂ ಮಿಕ್ಕವರಿಗೆ ಉಪಯೋಗಿಸುತ್ತಾ ತನ್ನ ಸುಖದುಃಖವನ್ನು ಲೆಕ್ಕಕ್ಕೇ ತಂದು ಕೊಳ್ಳದಿರುವದು ಹೆಚ್ಚಿನ ಸೌಜನ್ಯವು.

ಒಯ್ಯಲೊಡನಯ್ಯ ಎಂ । ದೊಯ್ಯನಾದರಿಸುತೆಡ ।
ಗಯ್ಯನೆಳೆದರೆ ಬಲದ ಕಯ್ಯ ನೀಡಿ॥
ಒಯ್ಯಲೊಂದೊಡವೆಯನು । ಸಯ್ಯೆಂದು ಮಿಕ್ಕುದನು ।
ಕಯ್ಯಾರೆ ಕೊಡವೇಳ್ದನಡಿಗೆ ನಮಿಪೆ ॥ ೨೫ ॥

೨೫. ಒಯ್ಯನೆ- ಪ್ರೀತಿಯಿಂದ ಒಯ್ಯಲು-ತೆಗೆದುಕೊಂಡು ಹೋದರೆ ; ಒಡವೆ-ಪದಾರ್ಥ ; ಸಯ್ಯೆಂದು - ಅದೇ ಸರಿಯೆಂದು ಎಣಿಸಿ ; ಕೊಡವೇಳ್ದನ - ಕೊಡುವದಕ್ಕೆ ಹೇಳಿದವನ.

ದೇಹಮಲತೀರ್ಥಗಳ । ಮಿಾಹದಿಂ ಪಾಙ್ಮಲಸ ।
ಮೂಹವದು ಭವನಾಮಭಜನೆಯಿಂದ ॥
ಹೋಹುದೀ ಮನದೊಳಿಹ । ಮೋಹಮಲ ಪರಭಕ್ತಿ ।
ಮಾಹಾತ್ಮ್ಯದಿಂದೆಂದನಡಿಗೆರಗುವೆ ॥ ೨೬ ॥

೨೬. ಮಿಾಹ-ಸ್ನಾನ ; ಭವನಾಮಭಜನೆ - ಈಸ್ವರನಾಮದ ಸ್ಮರಣೆ ; ಪರಭಕ್ತಿ - ಜ್ಞಾನದಿಂದ ಪಡೆಯುವ ಹೆಚ್ಚಿನ ಭಕ್ತಿ.

ಪರಭಕ್ತಿಗಿಂತ ಹೆಚ್ಚಿನ ಪವಿತ್ರವಸ್ತುವಿಲ್ಲ ; ಏಕೆಂದರೆ ಅದು ಮನಸ್ಸಿನ ಕಲ್ಮಷವನ್ನುತೆಗೆದುಹಾಕಿ ನಮ್ಮನ್ನು ಅತ್ಯಂತಪಾವನರನ್ನಾಗಿ ಮಾಡಿಬಿಡುತ್ತದೆ.

ಕ್ಷಣಕೊಂದು ಬಗೆಯಪ್ಪು : ದಣಮಿಲ್ಲ ಸಾರವಿದ ।
ಕೆಣಿಕೆಗಮರದ ದುಃಖದೋಷವಿಹುದು ॥

**ಅಣಕವಲ್ಲವು ಹಸಿಯ । ಹೆಣನವೋಲಶುಚಿ ಮೆ ।**

**ಯ್ಯೆಣಿಸಿ ನೋಡೆಂದನಡಿಮರೆವೊಗುವೆನು ॥ ೨೭ ॥**

೨೭. ಅಣು-ಸ್ವಲ್ಪವೂ ; ಎಣಿಕೆಗಮುರದ - ಲೆಕ್ಕಕ್ಕೆ ಸಿಕ್ಕದ ; ಅಣಕ - ಹಾಸ್ಯ.

ಶರೀರವು ಇರುವಾಗ ಅಶುಚಿ, ಕ್ಷಣಕ್ಷಣಕ್ಕೂ ವಿಕಾರವಾಗುತ್ತಲೇ ಇರುವದು, ದುಃಖಕ್ಕೆ ಈಡಾಗಿರುವದು.

**ಮಕ್ಕಳಾಟಿಕೆವೀಡು । ಮೊಕ್ಕಳದ ಜವ್ವನದ ।**

**ಕಕ್ಕಸದ ರುಜೆಗೀಡು ದೇಹ ನೋಡು ॥**

**ಹೊಕ್ಕು ಕಾಡುವ ಮುಪ್ಪು । ನಿಕ್ಕುವದು ಸಾವುಗಳಿ ।**

**ಗಿಕ್ಕೆಯೆಂದನ ಕಾಲ್ಗೆ ಮೆಯ್ಯಿಕ್ಕುವೆ ॥ ೨೮ ॥**

೨೮. ಬೀಡು-ಆಶ್ರಯ ; ಮೊಕ್ಕಳದ -ಹೆಚ್ಚಾದ ; ಜವ್ವನ-ಯೌವ್ವನ ; ಕಕ್ಕಸದ ರುಜೆ - ಬಲವಾದ ರೋಗ ; ನಿಕ್ಕುವದೆ - ನಿಶ್ಚಯವಾದ ; ಇಕ್ಕೆ-ಸ್ಥಾನ ; ಮೈಯ್ಯಿಕ್ಕು - ನಮಸ್ಕರಿಸು.

ಬಾಲ್ಯ, ಯೌವನ, ವಾರ್ಧಕ, ಮರಣ- ಇವೆಲ್ಲಕ್ಕೂ ಶರೀರವು ಆಶ್ರಯವಾಗಿರುವದು.

**ನೆಲನೀರುಬೆಂಕಿಗಳ । ಸುಳಿವ ಗಾಳಿಯ ಬಾನ ।**

**ನೆಲೆಯೆಂದು ನೆಚ್ಚದಿರು ಭೂತಂಗಳ ॥**

**ಸಲೆ ಇವ್ವೈದರಿನಾದ । ಪಲವಂದದಾಟ ಚಂ ।**

**ಚಲವೆಂದು ಪೇಳ್ದ ಚೇತನಕೆ ಮಣಿವೆ ॥ ೨೯ ॥**

೨೯. ಬಾನ-ಆಕಾಶವನ್ನು ; ನೆಲೆ-ಶಾಶ್ವತ ; ಪಲವಂದದ-ಬಗೆಬಗೆಯ.

. ಐದು ಭೂತಗಳೂ ಇವುಗಳಿಂದಾಗಿರುವ ದೇಹೇಂದ್ರಿಯವಿಷಯ ಗಳೂ ಅನಿತ್ಯ.

ದೇವನಿಲ್ಲೀ ಜಗವ । ಕಾವರಿಲ್ಲಾರುಮಿದು ।
ತಾವನರಿಯದ ಕಾಡುಮೊಲದ ಕೋಡು ॥
ಸಾವ ತಪ್ಪಿಸುವಂದ । ಮಾವುದಿಲ್ಲೆಂಬ ನುಡಿ ।
ಗೀವ ಕಿವಿಯನು ತೆಗೆಸಿದವಗೆ ನಮಿಪೆ ॥ ೩೦ ॥

೩೦. ಕಾವರು + ಇಲ್ಲ - ಕಾಪಾಡುವವರು ಇಲ್ಲ ; ತಾವು-ಸ್ಥಾನ ; ತಾವನರಿಯದ-ಎಲ್ಲಿಯೂ ಇಲ್ಲದ.

ದೇವರಿಲ್ಲ, ಜಗತ್ತು ಅಸತ್ಯ, ಸಾವು ಸ್ವಾಭಾವಿಕ- ಎನ್ನುವ ನಾಸ್ತಿಕರ ಮಾತಿಗೆ ಕಿವಿಗೊಡಬಾರದು.

ಸ್ತಂಬದಿಂ ಮೊದಲಾಗು । ತಂಭೋಜಭವನವರೆ ।
ಗೆಂಬತ್ತುನಾಲ್ಕು ಲಕ್ಷದ ಜನಿಗಳ ॥
ಚೆಂಬಿಡದೆ ಬಳಸಿದರು । ಮಿಂಬಿಲ್ಲ ನಿತ್ಯಸುಖ ।
ಕೆಂಬುದನು ತೋರಿದಗೆ ಕುಂಬಿಡುವೆನು ॥ ೩೧ ॥

೩೧. ಸ್ತಂಬ- ಮೋಟುಮರದಂಥ ಸ್ಥಾವರ ; ಅಂಭೋಜಭವ - ಬ್ರಹ್ಮ ; ಜನಿಗಳ - ಜನ್ಮಗಳನ್ನು ; ಬೆಂಬಿಡದೆ - ಹಿಂದಟ್ಟಿ ; ಬಳಸಿದರುಂ - ಸುತ್ತಿದರೂ ; ಇಂಬು - ಸ್ಥಳ ; ಕುಂಬಿಡು - ನಮಸ್ಕರಿಸು.

ಸ್ಥಾವರ ಪ್ರಾಣಿಗಳಿಂದ ಹಿಡಿದು ಅತ್ಯಂತೋತ್ತಮವಾದ ಬ್ರಹ್ಮನವರೆಗೂ ಸುಖವು ಹೆಚ್ಚುತ್ತಲೂ ದುಃಖವು ಕಡಿಮೆಯಾಗುತ್ತಲೂ ಹೋಗಿರುವದು ; ಆದರೂ ಇವರು ಯಾರಲ್ಲಿಯೂ ನಿತ್ಯಸುಖವು ಇರುವದಿಲ್ಲ.

ಸುರಲೋಕದೊಳಗಿರುವ । ತುರುಮರನು ಕಲ್ಲು ನೀ ।
ನಿರದೆ ಬಯಸಿದುದನು ಕುಡುವವೆಂಬ ॥
ಬರಿಯಾಸೆಯಲಿ ಕಿಡದೆ । ಕರೆಗೊರಲನಂ ಭಜಿಸು
ಪುರುಷಾರ್ಥಕೆಂದನಡಿ ಬಿಡದಿರ್ಪೆನು ॥ ೩೨ ॥

೩೨. ತುರು-ಹಸು ; ಕರೆಗೊರಲ-ವಿಷದಿಂದ ಕಪ್ಪಾದ ಕೊರಲುಳ್ಳ ಶಿವ.

ಸ್ವರ್ಗದಲ್ಲಿ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ - ಇವು ಕೇಳಿದರ್ಥವನ್ನು ಕೊಡುವವೆನ್ನುತ್ತಾರೆ ; ಆದರೆ ಅವು ಮುಖ್ಯಪುರುಷಾರ್ಥವನ್ನು ಎಂದಿಗೂ ಕೊಡಲಾರವು

ಸ್ನಾನಸಂಧ್ಯಾನ ಜಪ । ದಾನಯೋಗಾದ್ಯನು ।
ಷ್ಠಾನಂಗಳಭಿಮಾನ ಮೂಡದಂತೆ ॥
ಮಾನಸವನೊಳದಿರುಹಿ । ದೀ ನಯದನುಗ್ರಹವ ।
ನಾ ನೆನೆವೆನನುದಿನವು ಗುರುರಾಯನ ॥ ೩೩ ॥

೩೩. ಒಳದಿರುಹಿದ + ಈ ನಯದ - ಒಳಕ್ಕೆ ತಿರುಗಿಸಿರುವ ಈ ಪ್ರಕಾರದ.

ಹೊರಗಿನ ಕರ್ಮ, ಉಪಾಸನೆ- ಇವುಗಳಲ್ಲಿ ಅಭಿಮಾನವಿರಬಾರದು. ಒಳಗಿರುವ ಅಂತರ್ಯಾಮಿಯ ಕಡೆಗೆ ದೃಷ್ಟಿ ಇರಬೇಕು.

ಚರ್ಮದೋಲಾಗಸವ । ನಿಮ್ಮಡಿಸಿದಂದು ಬರಿ ।
ಹೆಮ್ಮೆಯಾ ಕರ್ಮದಿಂ ಮುಕ್ತಿಯೆಂದು ॥
ಹಮ್ಮಳಿದು ದೇವನಂ । ನೆಮ್ಮಿ ಭಜಿಸೆಂದು ಸ ।
ದ್ಧರ್ಮಹೃದಯವನೊರೆದವನಡಿಗೆರಗುವೆ ॥ ೩೪ ॥

೩೪. ಇಮ್ಮಡಿಸು-ಎರಡು ಮಡಿಕೆ ಮಾಡು ; ಹಮ್ಮು - ಅಹಂಕಾರ ; ನೆಮ್ಮಿ - ಆಶ್ರಯಿಸಿ.

ಅಹಂಕಾರದಿಂದ ಕೂಡಿದ ಕರ್ಮದಿಂದ ಮುಕ್ತಿಯಾಗುವದೆಂಬುದು ಆಕಾಶವನ್ನು ಮಡಿಸುವದರ ಹಾಗೆ ಅಸಾಧ್ಯವಾದ ಮಾತು ; ಆದ್ದರಿಂದ ದೇವರ ಸ್ವರೂಪವನ್ನು ಅರಿತು ಭಜಿಸಬೇಕೆಂದು ಶ್ರುತಿಯಲ್ಲಿದೆ.

ಕೆಚ್ಚನೆಯ ಬಟ್ಟೆಗಳ । ನಚ್ಚ ಬಿಳಿಯಂಬರವ ।
ನಚ್ಚಳಿಯದಾ ಕಾವಿಬಣ್ಣದುಡೆಯ ॥

ಹೆಚ್ಚುಕಡಿಮೆಯದಿಲ್ಲ । ನೆಚ್ಚದಿರು ಹೊರಗನೆಂ ।
ದೆಚ್ಚರಿಸಿದವನು ಸೇವೇಚ್ಛೆಯೆನಗೆ ॥ ೩೫ ॥

ಕೆಚ್ಚನೆಯ - ಕೆಂಪಾದ ; ಅಂಬರ - ಬಟ್ಟೆ ; ಉಡೆ - ಬಟ್ಟೆ.

ಬೇರೆಬೇರೆ ಮತದವರ ಸಾಧುಗಳು ಬೇರೆಬೇರೆ ಬಣ್ಣದ ಬಟ್ಟೆಯನ್ನು ಧರಿಸುವರು ; ಬಟ್ಟೆ ಯಾವ ಬಣ್ಣದ್ದಾದರೂ ಅವರಿಗೆಲ್ಲ ವಿರಕ್ತಿಯಿರಬೇಕೆಂದು ಭಾವಿಸುವದಕ್ಕಿಲ್ಲ. ಏಕೆಂದರೆ ಬಟ್ಟೆಯು ಹೊರಗಿನ ಗುರುತು ; ವಿರಕ್ತಿಯು ಮನಸ್ಸಿನಲ್ಲಿರಬೇಕಾದದ್ದು.

ಬೋಳುದಲೆ ಬಕ್ಕದಲೆ । ನೀಳುಜಡೆ ಬಿಟ್ಟತಲೆ ।
ಕೀಳಿಸಿದ ಕೂದಲಿನ ಜಾಳುದಲೆಯು ॥
ಕೀಳುಮೇಲಿವಕಿಲ್ಲ । ಕೇಳೆಂದ ಪರಿಶುದ್ಧ ।
ನೂಳಿಗವೆ ಇಹಪರದ ಬಾಳಿನ್ನಯ ॥ ೩೬ ॥

೩೬. ಬೇರೆಬೇರೆ ಮತದ ಸಂನ್ಯಾಸಿಗಳು ಬೇರೆಬೇರೆ ರೀತಿಯಲ್ಲಿ ತಲೆಯ ಕೂದಲನ್ನಿಟ್ಟುಕೊಳ್ಳುವರು. ಇದು ಬಾಹ್ಯಚಿಹ್ನವೇ ಹೊರತು ಮುಖ್ಯವಲ್ಲ. ಧರ್ಮಕ್ಕೆ ವೇಷವೇನೂ ಪ್ರಧಾನವಲ್ಲ.

ಆ ದೀಕ್ಷೆ ಈ ದೀಕ್ಷೆ । ಯಾದರವದೇನು ನಿನ ।
ಗಾ ದಯಾನಿಧಿ ದೇವನೊಲಿಯದಿರಲು ॥
ಬಾಧೆಯಿಲ್ಲದ ಭಕುತಿ । ಯಾ ದೀಕ್ಷೆಯನು ಮನದೊ ।
ಳೀ ಧರಿಸು ಸಾಕೆಂದನಡಿಯ ಸಾರ್ದೆ ॥ ೩೭ ॥

ಆದರವು + ಅದು + ಏನು.

ದೀಕ್ಷೆಯ ವೇಷವು ಪ್ರಧಾನವಲ್ಲ ದೇವರು ಒಲಿಯುವದಕ್ಕೆ ಭಕ್ತಿಯೇ ಮುಖ್ಯ.

ಜಟೆ ಭಸಿತ ರುದ್ರಾಕ್ಷಿ । ತುಟಿಗಳಲುಗಾಟ ಮೇಣ್ ।
ಘಟಿತಪದ್ಮಾಸನವು ಬೆರಳ ಮಡಿಕೆ ॥

ನಟನೆಯಾ ತಪವಿದಕೆ । ನಿಟಿಲನೇತ್ರನು ನಿಲುಕ ।
ದಿಟವೆಂದ ದಿಟ್ಟ ದೇಶಿಕನ ನೆನೆವೆ ॥ ೩೮ ॥

೩೮. ಭಸಿತ - ವಿಭೂತಿ ; ಮೇಣ್ - ಮತ್ತು ; ದೇಶಿಕ - ಗುರು.

ಹೊರಗಿನ ಆಡಂಬರವೇನೂ ನಿಜವಾದ ಭಕ್ತಿಗೆ ಬೇಡ.

ಮೃದ್ದಾರು ಶಿಲೆಗಡ್ಡ । ಬಿದ್ದು ತಣ್ಣೀರಿನೊಳ ।
ಗದ್ದಿ ದೇಹವ ನಡುಗುತೊದ್ದೆಯುಟ್ಟು ॥
ಇದ ಜಡವಸ್ತುಗಳಿ । ಗೆದ್ದೆದ್ದು ಕೈಮುಗಿವ ।
ಬುದ್ಧಿಯನು ಬಿಡಿಸಿದಗೆ ಬಾಗಿ ನಮಿಪೆ ॥ ೩೯ ॥

೩೯. ಮೃದ್ದಾರುಶಿಲೆ - ಮಣ್ಣು, ಮರ, ಕಲ್ಲು, ಮಣ್ಣಿನಿಂದ ಲಿಂಗವೇ ಮುಂತಾದ್ದನ್ನು ಮಾಡಿಕೊಂಡು ಪೂಜಿಸುವದು. ಕಟ್ಟಿಗೆಯಿಂದ ವಿಗ್ರಹಗಳನ್ನು ಕಡೆಸಿ ಅವನ್ನು ಪೂಜಿಸುವದು. ಕಲ್ಲಿನಿಂದ ಲಿಂಗವನ್ನೂ ಬೇರೆಬೇರೆ ವಿಗ್ರಹಗಳನ್ನೂ ಮಾಡಿ ಪೂಜಿಸುವದು- ಇವೆಲ್ಲ ಬಾಹ್ಯಾರ್ಚನೆಯ ವಿಧಗಳು. ಈಶ್ವರನು ಎಲ್ಲೆಲ್ಲಿಯೂ ಇರುವನೆಂಬುದನ್ನು ತಿಳಿಯುವದಕ್ಕೆ ಮುಂಚೆ ಪೂಜಿಸುವಾಗ ಹೊರಗಿನ ಯಾವದಾದರೊಂದು ವಸ್ತುವಿನಲ್ಲಿ ಈಶ್ವರನನ್ನು ಆವಾಹನೆಮಾಡಿಕೊಂಡು ಪೂಜಿಸಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ಮಿಂದು ಮಡಿಯುಟ್ಟು ನಿಯಮದಿಂದ ಈ ಪೂಜೆಯನ್ನು ಮಾಡತಕ್ಕದ್ದು. ಈ ಹೊರಗಿನ ವಿಚಾರಗಳು ಒಳಗಿನ ಅರ್ಚನೆಗೆ ಸಾಧನೆಯಾಗಬೇಕೇ ಹೊರತು ಅವೇ ಕೊನೆಯ ಮೆಟ್ಟಲಲ್ಲ. ಆದ್ದರಿಂದ ಇವುಗಳಲ್ಲಿಯೇ ಕೊನೆಗಾಣದೆ ಬೇಗ ಇವುಗಳನ್ನು ಅಂತರಂಗಪೂಜೆಗೆ ಸಾಧನವಾಗಿ ಮಾಡಿಕೊಳ್ಳಬೇಕು.

ಸತತ ಕುಸುಮಾಂಜಲಿ । ಸ್ತುತಿ ನಮಸ್ಕಾರ ಬಲಿ ।
ಧೃತಿಯೆಂಬ ಬರು ಬಾಹ್ಯಸಾದನಗಳ ॥
ಅತಿಯಾಗಿ ಹುಡುಕಿ ಕಾ । ಪಥದೆ ತೊಳಲದ ಪಿರಿಯ ।
ಮತಿಯಿತ ಮುನಿವರನ ಮುಡುಪಾಗಿಹೆ ॥ ೪೦ ॥

೪೦. ಬಲಿಹೃತಿ - ಬಲಿಹರಣ ; ಕಾಪಥ - ಕುತ್ಸಿತವಾದ ಮಾರ್ಗ ; ಮುಡುಪು - ಮೀಸಲು, ಆತನಿಗೇ ಸಲ್ಲಬೇಕಾದ ವಸ್ತು.

ಬಾಹ್ಯಾರ್ಚನೆಗೆ ಸಾಧನಗಳು ಹೆಚ್ಚು ಬೇಕು ; ಅವುಗಳಿಗಾಗಿ ಹೆಚ್ಚು ಕ್ಲೇಶಪಡುವದಕ್ಕಿಂತಲೂ ಅಂತರರ್ಚನೆಗೆ ಬೇಗ ತಿರುಗುವದು ಒಳ್ಳೆಯದು.

**ಏಕದೇವನ ಬಿಟ್ಟು । ಕಾಕುದೇವರ ಭಜಿಸಿ ।**
**ನೀ ಕೆಡದಿರೆಂದು ತತ್ವೈಕ್ಯವನ್ನು ॥**
**ತಾ ಕರೆದನುಗ್ರಹಿಸಿ । ದಾ ಕರುಣಿ ಗುರುವರನಿ ।**
**ಗೇಕಮತಿಯೊಳು ನತಿಯನಾಚರಿಸುವೆ ॥ ೪೧ ॥**

೪೧. ಹೊರಗಿನ ವಸ್ತುಗಳಲ್ಲಿ ಈಶ್ವರಬುದ್ಧಿಯನ್ನು ಮಾಡಬೇಕೆಂದು ದೊಡ್ಡವರು ಉಪದೇಶಿಸಿರುವದರ ತತ್ತ್ವವನ್ನು ತಿಳಿಯದೆ ಮೂಢರು ಆ ವಸ್ತುಗಳನ್ನೇ ದೇವರೆಂದು ಭ್ರಮಿಸುವರು. ಎಲ್ಲೆಲ್ಲಿಯೂ ಒಬ್ಬ ದೇವನೇ ವ್ಯಾಪಿಸಿರುವನೆಂಬುದು ಗುರುಬೋಧೆಯಿಂದ ತಿಳಿಯುವದು.

**ಕೆರೆಕಟ್ಟೆ ತೊರೆಗಳನು । ಪರಮತೀರ್ಥಗಳೆಂಬ ।**
**ತಿರೆಯರ್ಥಗಳ ಪೂಜ್ಯವಸ್ತುವೆಂಬ ॥**
**ನರರ ಪರದೈವಕ್ಕೆ । ದೊರೆಯೆಂಬ ಮಬ್ಬು ಪರಿ ।**
**ಹರಿಸಿದನ ಚರಮಕ್ಕೆ ಶಿರವಿಡುವೆನು ॥ ೪೨ ॥**

೪೨. ತಿರೆಯ + ಅರ್ಥಗಳ - ಭೂಮಿಯಲ್ಲಿರುವ ವಸ್ತುಗಳನ್ನು, ಜಡವಸ್ತುಗಳನ್ನು ; ದೊರೆ-ಸಮ ; ಮಬ್ಬು - ಅಜ್ಞಾನವನ್ನು.

ಬಾಹ್ಯವಸ್ತುಗಳಿಗೆ ಬೆಲೆಯಿಲ್ಲ, ಅವುಗಳಲ್ಲಿರುವ ದೇವತಾಸಾನ್ನಿಧ್ಯ ದಿಂದಲೇ ಅವಕ್ಕೆ ಬೆಲೆ.

**ನರರನುರಗರ ದಾನ । ವರ ಯಕ್ಷರಾಕ್ಷಸಾ ।**
**ಪ್ಸರರ ಕಿಂಪುರುಷಗಂಧರ್ವಾದ್ಯರ ॥**

ಉರಿಮಾರಿಮಸಣೆಗಳ ಮರೆದು ಮರ್ಚಿಸದಂದ ।
ದರಿವಿತ್ತ ಗುರುವರ್ಯರ್ಗಭಿನಮಿಸುವೆ ॥ ೪೩ ॥

೪೩. ಉರಿಮಾರಿ-ಸಿಟ್ಟಿನ ಮರಣಕಾರಕದೇವತೆ ; ಮಸಣಿ - ಸ್ಮಶಾನದ ಭೂತ ; ಮರೆದುಂ- ಮರೆತು ಕೂಡ ; ಅರ್ಚಿಸದ + ಅಂದದ + ಅರಿವ + ಇತ್ತ - ಪೂಜೆಮಾಡದಂಥ ತಿಳಿವನ್ನು ಕೊಟ್ಟ.

ಕೆಲವರು ಪೂಜೆಮಾಡದಿದ್ದರೆ ಕೇಡಾಗುವದು - ಎಂದು ಹೆದರಿ ಕ್ಷುದ್ರದೇವತೆಗಳನ್ನು ಪೂಜಿಸುವರು ; ಆದರೆ ಇದು ನಿಜವಾದ ಪೂಜೆಯಾಗಲಾರದು.

ಚಂದ್ರಸೂರ್ಯಾಗ್ನಿಗಳ । ನಿಂದ್ರಾಗ್ನಿಮುಖ್ಯರನು ।
ಸಾಂದ್ರಭಕ್ತಿಯೊಳರ್ಚಿಸುವ ಮೋಹದ ॥
ತಂದ್ರಿಯನು ತೊಲಗಿಸಿದ । ಜೇಂದ್ರಸುತನಡಿಯಂತ ।
ರಿಂದ್ರಿಯದೆ ನೆಲಸಿರ್ಕೆ ನಿರುತವೆನ್ನ ॥ ೪೪ ॥

೪೪. ಸಾಂದ್ರ - ದೃಢವಾದ ; ತಂದ್ರಿ - ಆಲಸ್ಯ ; ಅಜೇಂದ್ರಸುತನ- ಬ್ರಹ್ಮ, ಇಂದ್ರ - ಇವರಿಂದಲೂ ಹೊಗಳಲ್ಪಡುವ ಗುರುವಿನ ; ಅಂತರಿಂದ್ರಿಯದೆ- ಮನಸ್ಸಿನಲ್ಲಿ ; ನೆಲಸಿರ್ಕೆ- ನೆಲೆಸಿರಲಿ ; ನಿರುತ - ಯಾವಾಗಲೂ.

ತಮ್ಮ ಇಷ್ಟಾರ್ಥವನ್ನು ಈ ದೇವತೆ ಸಲ್ಲಿಸುವದೆಂದು ಮಾಡುವ ಪೂಜೆಯು ನಿಜವಾದ ಪೂಜೆಯಲ್ಲ.

ರಾಜೀವಭವನಪರೆ । ಗೀ ಜೀವರೆಲ್ಲ ಭವ ।
ಭಾಜನರು ತಾವಾಗಿ ಕೊರಗುತಿಹರು ॥
ನೈಜಮಹಿಮೆಯೊಳಿಪ್ಪ । ಮೂಜಗದ ದೇವನಂ ।
ನೀ ಜಾನಿಸೆಂದ ಗುರುಗಿರದೆರಗುವೆ ॥ ೪೫ ॥

೪೫. ರಾಜೀವಭವ- ಕಮಲದಲ್ಲಿ ಹುಟ್ಟಿದ ಬ್ರಹ್ಮ ; ಈ ಜೀವರೆಲ್ಲ - ಉತ್ತಮ - ಮಧ್ಯಮ - ಅಧಮರೂಪರಾದ ಜೀವರೆಲ್ಲ ; ಭವಭಾಜನರು -

ಸಂಸಾರಿಗಳು ; ನೈಜಮಹಿಮೆಯೊಳು - ತನ್ನ ಮಹಿಮೆಯಲ್ಲಿಯೇ, ಮತ್ತೊಂದರ ಆಶ್ರಯವಿಲ್ಲದೆ ; ಜಾನಿಸು- ಧ್ಯಾನಿಸು.

ಸಾತ್ತ್ವಿಕರಾಜಸತಾಮಸರಾದ ಪ್ರಾಣಿಗಳನ್ನು ಧ್ಯಾನಿಸುವದಕ್ಕಿಂತ ತ್ರಿಗುಣಾತೀತನಾದ ಪರಮೇಶ್ವರನನ್ನು ಧ್ಯಾನಿಸುವದೇ ಮೇಲು. ಏಕೆಂದರೆ ಮಿಕ್ಕವರೆಲ್ಲರೂ ಪರಮೇಶ್ವರನನ್ನೇ ಆಶ್ರಯಿಸಿಕೊಂಡಿರುತ್ತಾರೆ.

**ಇವ ದೇವನವನಲ್ಲ । ವಿವನೆಮ್ಮ ದೇವನೆಂ ।**
**ಬುವ ಮರುಳು ವಾದಿಗಳ ಮಾತದೇಕೆ ? ॥**
**ಶಿವದೇವನಿಂ ಪೆರರು । ಶವದೇವರೆಂದೆ ಬಗೆ ।**
**ಯುವ ಶರಣರಡಿವುಗೆಂದನ ನತಿಪೆನು ॥ ೪೬ ॥**

೪೬. ಅಡಿವುಗು- ಪಾದವನ್ನು ಸೇರು.

ಇರುವ ದೇವರೆಲ್ಲ ಒಬ್ಬನೆ ; ಆ ದೇವರನ್ನು ಬಿಟ್ಟರೆ ಉಳಿದದ್ದು ದೇವರಾಗಲಾರದು.

**ವೇದಶಾಸ್ತ್ರಗಳ ಕಲಿ । ತೋದಿನುರುಗರ್ವದಲಿ ।**
**ಕಾದಿ ಕಲ್ವಾಯ್ದು ಪರಮನ ಕಾಣದ ॥**
**ವಾದಿಗಳ ಕಂಟಕದ ।ಹಾದಿಯನೆ ಮಾಣೆಂದ ।**
**ಬೋಧಕರ ಬಲ್ಲಹನ ಬಗೆಯೊಳಿಡುವೆ ॥ ೪೭ ॥**

೪೭. ಕಂಟಕ-ಮುಳ್ಳು ; ಮಾಣ್-ಬಿಡು ; ಬೋಧಕರ ಬಲ್ಲಹ - ಗುರುಗಳ ವಲ್ಲಭ, ಸದ್ಗುರು ಬಗೆಯೊಳಿಡುವೆ - ಮನಸ್ಸಿನಲ್ಲಿಟ್ಟು ಧ್ಯಾನಿಸುತ್ತೇನೆ.

ವಿದ್ಯಾಗರ್ವದಿಂದ ವಾದಕ್ಕೆ ಬೀಳಬಾರದು.

**ಸಜ್ಜನರ ಹಾದಿಯಲಿ । ಹೆಜ್ಜೆದಪ್ಪದೆ ನಡೆಯೆ ।**
**ನುಜ್ಜುನುರುಗಹುದು ಸಂಶಯವೆಲ್ಲವು ॥**

ಉಜ್ಜುಗಿಸು ನೀನವರ । ಸಜ್ಜಾದ ನೇಹದಿಂ ।
ಪಜ್ಜಳಿಸಲರಿವನೆಂದಂಗೆ ಮಣಿವೆ ॥ ೪೮ ॥

೪೮. ನುಜ್ಜುನುರುಗಹುದು - ಪುಡಿಪುಡಿಯಾಗುವದು ; ಉಜ್ಜುಗಿಸು - ಯತ್ನಿಸು ; ಸಜ್ಜಾದ- ಸಿದ್ಧವಾದ ; ನೇಹದಿಂ - ಸ್ನೇಹದಿಂದ ; ಪಜ್ಜಳಿಸಲು - ಪ್ರಜ್ವಲಿಸುವದಕ್ಕೆ.

ಸತ್ಪುರುಷರು ನಮ್ಮನ್ನು ಪ್ರೇಮದಿಂದಲೇ ನೋಡುತ್ತಿರುವರು. ಅವರ ಜತೆಯಲ್ಲಿದ್ದರೆ ಸಂಶಯಗಳು ನೀಗಿ ಜ್ಞಾನವು ಬೆಳಗುವದು.

ಕಾಮಧೇನುವನು ಚಿಂ । ತಾಮಣಿಯ ಸುರತರುವ ।
ನೀ ಮಹಾಯತ್ನದಿಂ ಕಾಣಲಹುದು ॥
ಪ್ರೇಮಗಿರಿಶಿಖರದೆ ಮ । ಹಾಮಹಿಮರನು ಕಾಂಬು ।
ದೀ ಮಹಿಯೊಳರಿದೆಂದಗಭಿವಂದಿಪೆ ॥ ೪೯ ॥

೪೯. ಪ್ರೇಮಗಿರಿಶಿಖರದೆ-ಪ್ರೇಮವೆಂಬ ಪರ್ವತದ ಶಿಖರದಲ್ಲಿರುವ, ಪ್ರೇಮದ ಕೊನೆಯನ್ನು ಮುಟ್ಟಿರುವ ; ಅರಿದು - ಅಸಾಧ್ಯ.

ಕಾಮಧೇನು ಮುಂತಾದವುಗಳು ನಾವು ಕೇಳಿದ್ದನ್ನು ಕೊಡುವವು ; ಸಾಧುಗಳು ಪ್ರೇಮಾತಿಶಯದಿಂದ ಪರಮಪುರುಷಾರ್ಥವನ್ನು ತಾವೇ ಕೊಡುವರು.

ನುಡಿದುದೆಲ್ಲವು ಶಾಸ್ತ್ರ । ನಡೆದುದೆಲ್ಲವು ಯಾತ್ರೆ ।
ಬಿಡದೆ ಮಾಡುವ ಕೆಲಸವೆಲ್ಲ ಪೂಜೆ ॥
ದೃಢಭಕ್ತರಿರವೆ ಎಡೆ । ಬಿಡದೆ ಯೋಗವದೈಸೆ ।
ಒಡನಾಡು ನೀನೆಂದನಡಿಗೆರಗುವೆ ॥ ೫೦ ॥

೫೦. ಐಸೆ-ಅಲ್ಲವೆ.

ಸಜ್ಜನರ ಸಹವಾಸವು ದೊರಕಿದರೆ ಎಲ್ಲಾ ಪರಮಾರ್ಥಸಾಧನವೂ ದೊರಕಿದಂತೆ ; ಏಕೆಂದರೆ ಅವರ ವ್ಯವಹಾರವೆಲ್ಲ ಪರಮಾರ್ಥವಿಷಯವಾಗಿ ಇರುತ್ತದೆ.

ಶಿವನ ನೆಲೆಯರಿವೆನೆ । ನ್ನುವ ಗರ್ವವೇತಕಜ ।
ನವನ ಪಿತನಾರ್ತನಿಲ್ಲೆಂದು ಕೇಳಿ ॥
ಶಿವಶರಣರೊಲಿಯಲೊಲಿ । ಯುವನು ಶಿವನಿಂ ಭೇದ ।
ವಿವರ್ಗಿಲ್ಲವೆಂದಾತನಡಿಗೆ ನಮಿಪೆ ॥ ೫೧ ॥

೫೧. ಆರ್ತನಿಲ್ಲ- ಅರಿಯಲಾರದೆ ಹೋದನು.

ಬ್ರಹ್ಮನೂ ವಿಷ್ಣುವೂ ಸ್ವಪ್ರಯತ್ನದಿಂದ ಶಿವತತ್ತ್ವವನ್ನು ಅರಿಯುವದಕ್ಕೆ ಹೋದಾಗ ಅವರಿಗೆ ಅದು ನಾಗದೆ ಹೋಯಿತೆಂದು ಪುರಾಣ. ಭಕ್ತರಿಗೂ ದೇವರಿಗೂ ಭೇದವಿಲ್ಲವೆಂಬುದು ತಾತ್ಪರ್ಯ.

ಕನ್ನಡಿಯು ಮುಂದಿರಲು । ತನ್ನ ಮೊಗದಿರವು ಬಲು ।
ಚೆನ್ನಾಗಿ ತೋರ್ಪಂತೆ ಸತ್ಪುರುಷರ ॥
ಉನ್ನತದ ನಡೆ ನೋಡು । ನಿನ್ನ ದೋಷವು ತೋರ್ಪು ।
ದಿನ್ನೆಂದ ನಡಿಯೆ ಬಲುಮಾನ್ಯವೆನಗೆ ॥ ೫೨ ॥

೫೨. ಇರವು - ಸ್ಥಿತಿ ; ಇನ್ನು - ಆಮೇಲೆ.

ನತ್ಪುರುಷರ ಆಚಾರವನ್ನು ನೋಡುತ್ತಿದ್ದರೆ ನಮ್ಮ ದೋಷಗಳು ಸ್ಫುಟವಾಗಿ ತೋರುತ್ತವೆ

ಕಂಡ ಹೊತ್ತಗೆಯೆಲ್ಲ । ದುಂಡುಗಟ್ಟುತ್ತ ಬಲು ।
ಪಂಡಿತನು ನಾನೆಂದು ಶಾಸ್ತ್ರಂಗಳ ॥
ತುಂಡುಮಾತುಗಳಾಡಿ । ಭಂಡನಾಗದಿರೆಂಬ ।
ಖಂಡಿತವ ಪೇಳ್ದವನ ಕೊಂಡಾಡುವೆ ॥ ೫೩ ॥

೫೩. ಹೊತ್ತಗೆ - ಪುಸ್ತಕ ; ತುಂಡುಮಾತುಗಳು - ಅವರದಿಷ್ಟು ಇವರದಿಷ್ಟು - ಹೀಗೆ ಸೇರಿಸಿಕೊಂಡು ಆಡುವ ಮಾತುಗಳು.

ಶಾಸ್ತ್ರವಾಸನೆಯಿಂದ ಗರ್ವಿತನಾಗಬಾರದು.

ನಾಳೆ ನಾಡಿದು ಧರ್ಮ । ದೂಳಿಗವ ಗೆಯ್ವಮೆನೆ ।
ಕಾಳಜವನವರು ಕೊಂಡೊಯ್ವರೆಂದೊ! ॥
ಹೇಳಬಲ್ಲವರುಂಟೆ ? । ಭಾಳಲೋಚನನ ಭಜಿ ।
ಸೇಳೀಗಲೆಂದನಡಿಯೋಲೈಸುವೆ ॥ ೫೪ ॥

೫೪. ಊಳಿಗವ- ಕೆಲಸವನ್ನು ; ಗೆಯ್ವಂ - ಮಾಡೋಣ ; ಕಾಳಜವ- ಕಾಲಯಮ ; ಭಾಳಲೋಚನ - ಹಣೆಗಣ್ಣ ಶಿವ ; ಓಲೈಸುವೆ - ಸೇವಿಸುವೆನು.

ಧರ್ಮವನ್ನು ಆಮೇಲೆ ಮಾಡೋಣವೆಂದು ಹಿಂದಕ್ಕೆ ನೂಕಬಾರದು ; ಏಕೆಂದರೆ ಈ ಜೀವವು ಶಾಶ್ವತವಲ್ಲ.

ಮನೆಮಾರು ವಸನಾನ್ನ । ವನು ಪಡೆವೆನೆಂತೆಂದು ।
ಘನಯೋಚನೆಯ ಮನದೆ ತರುವೆಯೇಕೆ ? ॥
ವನದ ಗಿಡ ಮರ ಪಕ್ಕಿ । ಯಿನಿಸು ಕ್ರಿಮಿಗಳ ನೋಡಿ ।
ರೆನುತ ಧೈರ್ಯವ ಕೊಟ್ಟನನು ನಂಬಿದೆ ॥ ೫೫ ॥

೫೫. ವಸನ - ಬಟ್ಟೆ ; ಇನಿಸು - ಇಷ್ಟನ್ನು ; ಕ್ರಿಮಿಗಳ - ಸಣ್ಣ ಪ್ರಾಣಿಗಳನ್ನು ; ನೋಡಿರು - ನೋಡಿಕೊಂಡು ಇರು.

ಗಿಡಮರಗಳಿಗೂ ಪಶುಪಕ್ಷಿಗಳಿಗೂ ಆಹಾರವನ್ನು ಕೊಡುವ ದೇವರು ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳಲಾರನೆ ? ಎಂದು ಧೈರ್ಯದಿಂದ ಭಕ್ತಿಯನ್ನು ಮಾಡಬೇಕು.

ಅಂಗಡಿಯನಿಡುವಂತೆ । ಚುಂಗಡಿಯ ಬಯಸುವಂ ।
ತಂಗವಿಸಿ ಬಲುಬಗೆಯ ಬಯಕೆಗಳನು ॥
ಸಂಗಡಿಪ ಕರ್ಮಗಳ । ಸಂಗವನೆ ತೊರೆಯೆಂದ ।
ಮಂಗಲಾತ್ಮನ ಪದಕೆ ಪೊಡೆಮಡುವೆನು ॥ ೫೬ ॥

೫೬. ಚುಂಗಡಿ - ಬಡ್ಡಿ ; ಅಂಗವಿಸಿ - ಇಚ್ಛೈಸಿ ; ಸಂಗಡಿಪ - ಮಾಡುವ ; ಪೊಡೆಮಡು- ನಮಸ್ಕರಿಸು.

ಫಲದ ಬಯಕೆಯಿಂದ ಮಾಡುವ ಕರ್ಮಗಳು ಈಶ್ವರಸೇವೆ ಯೆನಿಸುವದಿಲ್ಲ. ಅಂಗಡಿಯನ್ನಿಟ್ಟವನು ದುಡ್ಡಿಗಾಗಿ ವಸ್ತುಗಳನ್ನು ಕೊಡುತ್ತಾನೆ ; ಸಾಹುಕಾರನು ಬಡ್ಡಿಗಾಗಿ ಹಣವನ್ನು ಸಾಲ ಕೊಡುತ್ತಾನೆ. ಆದರೆ ಇವರಿಗೆ ದಾನಮಾಡಿದ ಫಲವು ಬರುವದೆ ? ಇಲ್ಲ. ಇದರಂತೆ ಕಾಮ್ಯಕರ್ಮವನ್ನು ಮಾಡಿದವರು ನಿಜವಾದ ಈಶ್ವರಭಕ್ತರಾಗಲಾರರು.

ಅರಸರಾಗಿಹ ನರರ । ನರಸಿ ಬಳಲುವೆಯೇಕೆ ? ।
ಹೊರಿಸುವರದೇನು ಸುಖಸಾಮ್ರಾಜ್ಯವ ? ॥
ಸರಸನುಮೆಯರಸ ಭ । ಕ್ತರ ಕರೆಸುತಮೃತವನೆ ।
ಸುರಿಸುವನು ನೋಡೆಂದಗಿರದೆರಗುವೆ ॥ ೫೭ ॥

೫೭. ಅರಸ - (ಪ್ರೇಮವಿಲ್ಲದವ) ರಾಜ : ಸರಸ - ಪ್ರೇಮದಿಂದ ಕೂಡಿರುವ ; ಅಮೃತ-ನಾವಿಲ್ಲದ ಕೈವಲ್ಯ.

ಮನುಷ್ಯನು ಅಧಿಕಾರಿಗಳ ಒಲುಮೆಯನ್ನು ಬಯಸಿ ಮಾಡುವ ಸೇವೆಯನ್ನು ಈಶ್ವರನಲ್ಲಿ ಮಾಡಿದರೆ ಅವನು ಅವಶ್ಯವಾಗಿ ಇವನಿಗೆ ಪ್ರಸನ್ನನಾಗುವನು ಏಕೆಂದರೆ ಭಕ್ತಿಯನ್ನು ಮಾಡಿದವರ ಮೇಲೆ ಪ್ರೇಮವುಂಟಾಗುವದು ಸ್ವಾಭಾವಿಕವಾಗಿರುವದು.

ಎಸಗಿರ್ದುದೆಲ್ಲ ಮಾ । ವಿಷಮಾಕ್ಷನರ್ಪಣೆಗೆ ।
ಪೆಸರಿಸಿದ ಮಾತೆಲ್ಲವವನ ನುತಿಗೆ॥
ವಿಷಯಗಳ ಸಂಚಯುವ । ದೆಸೆವರ್ಚನಾರ್ಥಮೆ ।
ನ್ನಿಸಿದ ಭವ್ಯನ ಪದವ ಭಾವಿಸುವೆನು ॥ ೫೮ ॥

ಎಸಗು- ಮಾಡು ; ವಿಷಮಾಕ್ಷ - ಬೆಸಸಂಖ್ಯೆಯ ಕಣ್ಣುಳ್ಳವ, ಮೂರು ಕಣ್ಣುಳ್ಳ ಶಿವ ; ಸಂಚಯು - ಕೂಡಿಹಾಕಿದ್ದು.

ತ್ರಿಕರಣಗಳಲ್ಲಿ ಮಾಡಿದ್ದನ್ನೂ ಈಶ್ವರಾರ್ಪಣೆ ಮಾಡಬೇಕು.

ಕಾಮಹರದರುಶನದೆ । ಕಾಮವನು,ಸಂಸಾರ ।
ಭೀಮನನು ಮರೆಮಾಳ್ಪ ಮರಹಿನಲ್ಲಿ ॥
ನೀ ಮಹಾಕ್ರೋಧವನು । ನೇಮದೊಳು ನಿರಿಸೆಂದ ।
ಸೋಮಶೇಖರತನುವ ಸೇವಿಸುವೆನು ॥ ೫೯ ॥

೫೯. ಸಂಸಾರಭೀಮನನು- ಸಂಸಾರಕೆ, ಭಯಂಕರನಾದ ಈಶ್ವರನನ್ನು ನಿರಿಸು-ನಿಲ್ಲಿಸು ಸೋಮಶೇಖರತನು-ಚಂದ್ರಶೇಖರನಾದ ಶಿವನ ಅವತಾರ.

ಕಾಮಹರನನ್ನು ನಾನು ನೋಡಬೇಕು-ಎಂಬ ಕಾಮವನ್ನು ಮಾಡಬೇಕು ; ಸಂಸಾರವನ್ನು ನಾಶಪಡಿಸುವ ಶಿವನನ್ನು ಮರೆಮಾಡಿರುವ ಅಜ್ಞಾನದಲ್ಲಿ ಕೋಪವನ್ನು ಮಾಡಬೇಕು. ಹೀಗೆಯೇ ಮದಮತ್ಸರಾದಿಗಳನ್ನೂ ಯಥಾಯೋಗ್ಯವಾಗಿ ಭಕ್ತಿಗೇ ಉಪಯೋಗಿಸಿಕೊಳ್ಳಬೇಕು.

ಗುಡಿಗೋಪುರಂಗಳನು । ಹುಡುಕದೆನ್ನಯ ಹೃದಯ
ದೆಡೆಯಲ್ಲಿ ಗುಡಿಗಟ್ಟಿ ಪರಮಶಿವನ ॥
ಎಡೆವಿಡದ ಭಕ್ತಿಯೊಳು । ಸಡಗರದೆ ಪೂಜಿಸುವ ।
ಬೆಡಗ ತೋರಿದನೆಡೆಗೆ ಪೊಡೆಮಡುವೆನು ॥ ೬೦ ॥

೬೦. ಬಾಹ್ಯಪೂಜೆಗೆ ಗುಡಿಗೋಪುರಾದಿಗಳು ಬೇಕು ; ಇವುಗಳನ್ನು ದೊರಕಿಸುವದೂ ಕಷ್ಟ ಅವು ದೊರಕಿದರೂ ಮನಸ್ಸಿನಲ್ಲಿ ನಿಜವಾದ ಭಕ್ತಿಯಿಲ್ಲದಿದ್ದರೆ ಆ ಪೂಜೆಯು ನಿಸ್ಸಾರವಾಗಿರುವದು. ಆದ್ದರಿಂದ ಮಾನಸಪೂಜೆಯೇ ಹೆಚ್ಚಿನದು.

ಬಂಧಲಕ್ಷ್ಯದ ಮುದ್ರೆ ।ಯೊಂದುಗೆಯ ಕಲೆತ ಪಲ।
ವಂದದಾಸನವ ನಾಡೀಶುದ್ಧಿಯ ॥
ಹೊಂದಿ ದೇಹವನು ಪಲ । ವುಂ ದಿನವು ಕಾಪಿಡುವ ।
ಹಂದಿಯಾಟವ ನಿಲಿಸಿದವಗೆ ನಮಿಪೆ ॥ ೬೧ ॥

೬೧. ಬಂಧ-ಶರೀರದ ಒಂದೊಂದವಯವದ ಜೋಡಣೆ ; ಲಕ್ಷ್ಯ-ನೋಟವನ್ನು ಒಂದೊಂದು ಕಡೆ ಗೊತ್ತಾಗಿ ನಿಲ್ಲಿಸುವದು ; ಒಂದುಗೆಯ - ಹೊಂದಿಕೆಯನ್ನು ಕಲೆತ - ಸೇರಿದ ; ಮುದ್ರೆ - ಕೈಯ್ಯನ್ನು ಹಲವು ಬಗೆಯಾಗಿ ಜೋಡಿಸುವದು ಆಸನ - ಪದ್ಮಾಸನ, ವೀರಾಸನ - ಮುಂತಾದ ಕೂತು ಕೊಳ್ಳುವ ಬಗೆಗಳು ನಾಡೀಶುದ್ಧಿ - ಪ್ರಾಣಾಯಾಮಕ್ಕೆ ಮೊದಲು ಆಗ ಬೇಕಾದ ಸಾಧನ ; ಪಲವುಂ ದಿನವು - ಬಹು ದಿನಗಳವರೆಗೂ.

ಇವೆಲ್ಲ ಹಠಯೋಗದಲ್ಲಿ ಹೇಳಿವೆ. ಈ ಯೋಗದಿಂದ ದೇಹದ ಆಯುಸ್ಸು ಹೆಚ್ಚುವದೇ ಹೊರತು ಹೆಚ್ಚಿನ ಪುರುಷಾರ್ಥವಿಲ್ಲ. ಅಶುಚಿಯಾದ ಈ ಸಂಸಾರದಲ್ಲಿ ಹಂದಿಯ ಹಾಗೆ ಬಹುಕಾಲ ಬಾಳುವದರಿಂದ ತಾನೆ ಏನು ಪ್ರಯೋಜನ ?

ಕಣ್ಣಮುಚ್ಚುತೆ ಸೆಳೆದು । ಸಣ್ಣಿಸುತಲುಸುರ ಪಲ ।
ವಣ್ಣದಿಂ ನಾದಬಿಂದುಗಳಾಟವ ॥
ಬಣ್ಣಿಸುವ ಯೋಗ ಮು । ಕ್ಕಣ್ಣನೊಲುಮೆಯ ಕುಡದ ।
ಚಿಣ್ಣಾಟವೆಂದನೊಳೆ ಚಿತ್ತವಿಡುವೆ ॥ ೬೨ ॥

೬೨. ಸಣ್ಣಿಸು - ಸೂಕ್ಷ್ಮಮಾಡು ; ಪಲವಣ್ಣದಿಂ- ಬೇರೆಬೇರೆ ರೀತಿಯಿಂದ ; ನಾದಬಿಂದು- ಯೋಗಾಭ್ಯಾಸವನ್ನು ಮಾಡುವವರಿಗೆ ತೋರುವ ಒಳಧ್ವನಿಗಳು ಮತ್ತು ಬೆಳಕುಗಳು ; ಚಿಣ್ಣಾಟ - ಹುಡುಗಾಟ.

ಪ್ರಾಣಾಯಾಮದಿಂದಲೂ ನಾಡೀಶುದ್ಧಿಯಿಂದಲೂ ಕೆಲವು ಗುರುತುಗಳಾಗುವವೆಂದು ಯೋಗಿಗಳು ಹೇಳುತ್ತಾರೆ. ಆದರೆ ಹುಡುಗರು ಆಟದಲ್ಲಿ ಗೆಲ್ಲುವ ಗೋಲಿಗಜ್ಜುಗಗಳ ಹಾಗೆ ಆ ಸಿದ್ಧಿಗಳು ಬೆಲೆ ಇಲ್ಲದವುಗಳಾಗಿರುವವು. ಈಶ್ವರನ ಅನುಗ್ರಹವೊಂದೇ ಬೆಲೆಯುಳ್ಳದ್ದು.

ಕುಂಡಲಿನಿಯೆಂಬೊಂದು । ಮಂಡಿಸಿದ ಶಕ್ತಿಯನು ।
ಕಂಡೆಬ್ಬಿಸುತ್ತಾರು ಚಕ್ರದೊಳಗೆ ॥

ಅಂಡಲೆದು ಸಿದ್ಧಿಗಳ । ನುಂಡು ಫಲವೇನು ? ನಂ ।
ಜುಂಡನನೆ ನೆನೆಯೆಂದಗಂಜಲಿಯಿದು ॥ ೬೩ ॥

೬೩. ಮುಂಡಿಸಿದ - ಮೂಲಾಧಾರದಲ್ಲಿ ಮಲಗಿರುವ ;

ಕುಂಡಲಿನಿ ಎಂಬ ಶಕ್ತಿಯು ಅವ್ಯಕ್ತರೂಪವಾಗಿರುವದೆಂದೂ, ಯೋಗಾಭ್ಯಾಸದಿಂದ ಅದು ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ- ಎಂಬ ಆರು ಚಕ್ರದೊಳಗೆ ಹಾದು ಹೋಗುತ್ತ ಹೋಗುತ್ತ ಕೆಲಕೆಲವು ಸಿದ್ಧಿಗಳಾಗುವವೆಂದೂ ಕೊನೆಗೆ ಸಮಾಧಿಸುಖವಾಗುವದೆಂದೂ ಯೋಗಿಗಳು ಹೇಳುವರು. ಆದರೆ ಈ ಸುಖವೂ ಸಿದ್ಧಿಗಳೂ ಅನಿತ್ಯವೇ ಆಗಿರುವವು. ಆದ್ದರಿಂದ ಯೋಗದ ಸಿದ್ಧಿಗಳಿಗೆ ಮರುಳಾಗದೆ ಭಕ್ತಿಮಾಡಬೇಕು.

ಕೇಳು ಕಿವಿದಣಿಯೆ ತಿಳಿ । ದೇಳು ದಿನದಿನ ವೇಳೆ ।
ವೇಳೆಯೊಳು ಜಾನಿಸುತಿರಾದರದಲಿ ॥
ಬಾಳಲೋಚನನ ಕಂ । ದಾಳು ಸುಖಿಸುಧೆಯೊಳೆಂ ।
ದೇಳಿದೆಯನಿತ್ತವನ ಸೋಲೈಸುವೆ ॥ ೬೪ ॥

೬೪. ಜಾನಿಸುತಿರು - ಧ್ಯಾನಮಾಡುತ್ತಿರು ; ಆಳು-ಮುಳುಗು ; ಏಳಿದೆ - ಹೆಚ್ಚಿನ ಧೈರ್ಯ.

ಶಾಸ್ತ್ರಶ್ರವಣವನ್ನು ಬೇಕಾದ ಹಾಗೆ ಮಾಡಬೇಕು ; ತಿಳಿದವರಲ್ಲಿ ತತ್ತ್ವಾರ್ಥವನ್ನು ಕುರಿತು ಬೇಕಾದ ಹಾಗೆ ಚರ್ಚಿಸಬೇಕು ; ಹೀಗೆ ತಿಳಿದ ಅರ್ಥವೇ ಈಶ್ವರತತ್ತ್ವವೆನಿಸುವದು. ಈಶ್ವರಧ್ಯಾನವನ್ನು ಎಡೆಬಿಡದೆ ಪ್ರಯತ್ನದಿಂದ ಮಾಡುತ್ತಿದ್ದರೆ ನಿತ್ಯಸುಖವು ಕೈಗೂಡುವದು.

ಭೂಮಿಯೇ ಪೀಠವಾ । ವ್ಯೋಮವೇ ದೇಹ ಮೇಣ್ ।
ಸೋಮಸೂರ್ಯಾಗ್ನಿಗಳೆ ನೇತ್ರಂಗಳು ॥
ಕಾಮಹರ ಋಗ್ಯಜು । ಸ್ಸಾಮಾದಿವಕ್ತ್ರನೆಂ ।
ದಾ ಮಹಿಮೆಯೊರೆದನಡಿಗಿಂದು ನಮಿಪೆ ॥ ೬೫ ॥

ವ್ಯೋಮ- ಆಕಾಶ ; ವಕ್ತ್ರ - ಮುಖ.

ಸಗುಣಧ್ಯಾನವನ್ನು ಮಾಡುವಾಗ ಪ್ರಪಂಚವೆಲ್ಲ ಈಶ್ವರನ ಶರೀರವೆಂದು ಭಾವಿಸಬೇಕು. ನಿಜವಾಗಿ ಪರಮಾತ್ಮನನ್ನು ಬಿಟ್ಟು ಪ್ರಪಂಚವೇ ಇರುವದಿಲ್ಲ ; ಆತನನ್ನು ಅವಲಂಬಿಸಿಯೇ ಇದು ತೋರಿಕೊಳ್ಳುವದು.

**ಎಣಿಕೆಗಳವಡದಿರುವ । ಗುಣಕರ್ಮಮಹಿಮೆಗಳ ।**
**ಕಣಿಯಪ್ಪ ದೇವದೇವನ ನಿಜವನು ॥**
**ಅಣುಮನದೆ ಸಂಗೊಳಿಸಿ । ತಣಿವ ನೆಲೆಯಿತ ಸ ।**
**ದ್ಗುಣಿಗೆ ಶರಣೆಂದಾನುತಡಿವಿಡಿಯುವೆ ॥ ೬೬ ॥**

ಅಳವಡದಿರುವ - ಸಿಕ್ಕದಿರುವ ಸಂಗೊಳಿಸಿ - ಸೇರಿಸಿ ; ತಣಿವ - ತೃಪ್ತಿಹೊಂದುವ ; ನೆಲೆ- ಆಧಾರವಾದ ಜ್ಞಾನ.

ಒಂದು ಗಣಿಯಲ್ಲಿರುವ ರತ್ನಗಳನ್ನು ಶಾಸ್ತ್ರಪರಿಚಯವುಳ್ಳವರ ಸಹಾಯದಿಂದಲೂ ಸ್ವಪ್ರಯತ್ನದಿಂದಲೂ ಸಾಮಾನ್ಯರಾದ ಮನುಷ್ಯರು ತೆಗೆದುಕೊಳ್ಳುವದಕ್ಕಾಗುತ್ತದೆ. ಇದರಂತೆ ಪರಮಾತ್ಮನ ಲೆಕ್ಕವಿಲ್ಲದಷ್ಟು ಗುಣಗಳೂ ಕರ್ಮಗಳೂ ಲೀಲೆಗಳೂ ಗುರುಬೋಧೆಯಿಂದ ನಮ್ಮಂಥವರ ಮನಸ್ಸಿಗೂ ತಿಳಿಯುವದು. ಧ್ಯಾನದಲ್ಲಿ ಈಶ್ವರನ ಆಕಾರವನ್ನೇ ಅಲ್ಲದೆ ಈ ಗುಣಗಳನ್ನೂ ಕರ್ಮಗಳನ್ನೂ ಲೀಲೆಗಳನ್ನೂ ಮನಸ್ಸಿನಲ್ಲಿ ತಂದುಕೊಳ್ಳಬೇಕು.

**ದೇವದಾನವ ಮುಖ್ಯ । ಜೀವರೀ ಸಂಸಾರ ।**
**ಜೀವನದ ಕಡಲ ಕಾಮದೆ ಕಡೆವರು ॥**
**ಈವೆನಮೃತವನೆಂದು । ತಾ ವಿಷವ ಕುಡಿದ ಮಾ ।**
**ದೇವನಾ ದಯೆದೋರ್ದಗಾನತಿಯಿದು ॥ ೬೭ ॥**

೬೭. ಜೀವರು ಕಾಮಾರ್ತರಾಗಿ ಬರಿನೀರಿನ ಸಮುದ್ರದಂತಿರುವ ಈ ಸಂಸಾರದಲ್ಲಿ ಸುಖವನ್ನು ಹುಡುಕಿ ಕಡೆಯುತ್ತಿರುವರು ; ಆದರೆ ಸಮುದ್ರವನ್ನು ಅಮೃತಕ್ಕಾಗಿ ದೇವಾಸುರರು ಕಡೆದಾಗ ಅವರಿಗೆ ಬೇಕಿಲ್ಲದ ವಿಷವು ಹುಟ್ಟಿದಂತೆ ಕಾಮದಿಂದ ವಿಷಯಸುಖವನ್ನು ಅರಸುತಿರುವ ಜೀವರಿಗೆ ವಿಷದಂತೆ

ಸಂಕಟಗೊಳಿಸುವ ದುಃಖಿಗಳು ಗಂಟುಬೀಳುವವು. ಆಗ ವಿಷಯ ಸುಖಕ್ಕೆ ಬೇಸತ್ತು ತಮ್ಮ ದುಃಖವನ್ನು ಪರಿಹರಿಸಬೇಕೆಂದು ಈಶ್ವರನನ್ನು ಶರಣು ಹೋಗುವರು.

ವಿರತಿಗಧಿಕವದೇನು । ಪೆರತಿಲ್ಲವೆಂಬುದನು ।
ಚರಿತೆಯಿಂ ತೋರಲೆಣಿಸಿದ ಶರ್ವನು ॥
ಕರಿಚರ್ಮಬೂದಿನರ । ಶಿರಗಳಿಂ ಮೆರೆವೆನೆಂ ।
ದೊರೆದ ಗುರುದೇವಂಗೆ ಶರಣೆಂಬೆನು ॥ ೭೮ ॥

೭೮. ವಿರತಿಗೆ- ವೈರಾಗ್ಯಕ್ಕಿಂತ ; ಪೆರತು - ಮತ್ತೊಂದು ; ಚರಿತೆ - ತನ್ನ ನಡತೆ.

ತಾನು ಸರ್ವೈಶ್ವರ್ಯಗಳಿಂದ ಕೂಡಿದವನಾಗಿದ್ದರೂ ಪರಶಿವನು ಆನೆಯ ಚರ್ಮವನ್ನು ಹೊದೆದು, ಬೂದಿಯನ್ನು ಹಚ್ಚಿಕೊಂಡು, ನರಕಪಾಲವನ್ನು ಕಯ್ಯಲ್ಲಿ ಹಿಡಿದಿರುವದು ವೈರಾಗ್ಯವೇ ಹೆಚ್ಚಿನ ಸುಖವೆಂದು ಜನರಿಗೆ ಬೋಧಿಸುವದಕ್ಕೆ.

ಆಕಾರವಿಲ್ಲದನ । ನಾ ಕಾಂಬೆನೆಂತೆಂದು ।
ಕಾಕುಯೋಚನೆ ಗೆಯ್ಯದಿರು ಶರ್ವನು ॥
ಏಕಾಂತಭಕ್ತರಿಗ । ನೇಕರೂಪಂಗಳಿಂ ।
ತಾ ಕಣ್ಗೆವರ್ಪನೆಂಬವನ ವಂದಿಪೆ ॥ ೭೯ ॥

೭೯. ಕಾಕು - ಕುತ್ಸಿತ ; ಏಕಾಂತಭಕ್ತರಿಗೆ - ನಿಯಮವಾಗಿ ಈಶ್ವರನಲ್ಲಿಯೇ ಭಕ್ತಿಯುಳ್ಳವರಿಗೆ ; ಕಣ್ಗೆವರ್ಪನು - ಕಾಣಿಸಿಕೊಳ್ಳುವನು.

ತನ್ನ ನಿಜರೂಪದಿಂದ ಯಾವ ಆಕಾರವೂ ಇಲ್ಲದವನಾದರೂ ಭಕ್ತರಿಗಾಗಿ ಅನೇಕರೂಪಗಳನ್ನು ಧರಿಸುವನು. ಭಕ್ತಿಯಿಂದ ಪರಮೇಶ್ವರನನ್ನು ನಾವು ಸಾಕಾರನನ್ನಾಗಿಯೂ ಕಾಣಬಹುದು.

ತನ್ನಿಚ್ಚೆಯಿಂದೊಗೆವ । ಭಿನ್ನರೂಪಗಳೊಳವು ।
ಬಾನ್ನವಿರಗೆಂದು ಬಲ್ಲವರೊರೆವರು ॥
ಮುನ್ನ ಸನಕಾದಿಗಳು । ಸನ್ನಿಯಿಂ ಕಂಡ ಪರಿ ।
ಜಂ ನೆನೆವುದೆಂದನಂ ಮನದೊಳಿಡುವೆ ॥ ೭೦ ॥

೭೦. ಒಗೆವ-ಹುಟ್ಟುವ ; ಒಳವು-ಉಂಟು ಬಾನ್ನವಿರ-ವ್ಯೋಮಕೇಶನಾದ ಶಿವ ; ಒರೆವರು - ಹೇಳುವರು ; ಸನ್ನಿ - ಸತ್ಯ ; ಪರಿಜಂ - ಆಕಾರವನ್ನು.

ಪುರಾಣಾದಿಗಳಲ್ಲಿ ಪರಮೇಶ್ವರನ ಬಗೆಬಗೆಯ ರೂಪಗಳನ್ನು ವರ್ಣಿಸಿರುತ್ತದೆ. ಇವುಗಳನ್ನು ಧ್ಯಾನಕ್ಕಿಟ್ಟುಕೊಳ್ಳಬೇಕು.

ದೇಹ ದೇವಾಲಯಕೆ । ನೇಹದಿಂ ಕರೆಯುತು ।
ತ್ಸಾಹದಿಂ ಕುಳ್ಳಿರಿಸಿ ಹೃತ್ಪೀಠದಿ ॥
ಮೋಹವನೆ ಕಳೆದರ್ಚಿಪೀ । ಹದನ ಶಿವಪೂಜೆ ।
ಗೂಹಿಸೆಂದನ ನಿರುತವರ್ಚಿಸುವೆನು ॥ ೭೧ ॥

೭೧. ನೇಹದಿಂ - ಸ್ನೇಹದಿಂದ ; ಹದನ - ರೀತಿಯನ್ನು ; ನಿರುತ - ಯಾವಾಗಲೂ.

ನಮಗೆ ಬಹಳವಾಗಿ ಬೇಕಾದವರು ಮನೆಗೆ ಬಂದರೆ ಸತ್ಕಾರದಿಂದ ಆಸನಾದಿಗಳನ್ನು ಕೊಡುವಂತೆ ಹೃದಯದಲ್ಲಿಯೇ ಪೀಠವನ್ನು ಕಲ್ಪಿಸಿ ಈಶ್ವರನನ್ನು ಕುಳ್ಳಿರಿಸಿ ಧ್ಯಾನಮಾಡಬೇಕು.

ಮಸಣದಲೆಪದ ಪಾದ । ಭಸಿತಾಂಕದಂಗ ಕ ।
ಪ್ಪೆಸೆವ ಬಿಸಗೊರಲುರಗ ರುಂಡಮಾಲೆ ॥
ನೊಸಲಗಣ್ಣರೆವೆರೆಯ । ಪಸದನವು ಬಾನ್ಬೊರೆಯ ।
ಬೆಸೆದ ರೂಪರ್ಚಿಸೆಂದನ ಭಾವಿಪೆ ॥ ೭೨ ॥

೭೨. ಮಸಣ - ಸ್ಮಶಾನ ; ಅಲೆಪ - ಸಂಚಾರ: ಭಸ್ಮಿತಾಂಕದ -

ಬೂದಿಯ ಗುರುತುಳ್ಳ ; ಬಿಸ - ವಿಷ ; ನೊಸಲ - ಹಣೆಯ ; ಅರೆವೆರೆ - ಅರ್ಧಚಂದ್ರ ; ಪಸದನ - ಒಡವೆ ; ಬಾಂದೊರೆ - ಆಕಾಶಗಂಗೆ ; ಬೆಸೆದ - ಸೇರಿರುವ.

ಪಾದಾದಿಯಾಗಿ ತಲೆಯವರೆಗಿನ ರೂಪವನ್ನು ಭಾವಿಸಿಕೊಳ್ಳಬೇಕು.

ಭಾವುಕರು ಭಜಿಪ ಪದ । ದೇವಿಯೇರಿದ ತೊಡೆಯು ।
ಹಾವುದಾವಿನ ನಡುವು ಭಸಿತದೇಹ ॥
ಆ ವನಜಭವನರಿವ । ದೇವನಾ ನೆಳ್ಳುಗುರು ।
ಭಾವಿಸಿವನೆಂದನನು ಭಜಿಸುತಿರುವೆ ॥ ೭೩ ॥

೭೩. ಭಾವುಕರು - ಭಕ್ತರು ; ಹಾವುದಾವು- ಹಾವಿನ ಉಡಿದಾರ ; ನೆಳ್ಳುಗುರು - ಮೊನೆಯಾದ ಉಗುರು.

ಬ್ರಹ್ಮನ ಐದನೆಯ ತಲೆಯನ್ನು ಚಿವುಟಿ ತೆಗೆದು ಶಿವನು ಅಹಂಕಾರ ಖಂಡನೆ ಮಾಡಿದನೆಂದು ಶಿವಪುರಾಣ ; ಭಾವಿಸಿವನೆಂದನನು - ಭಾವಿಸು + ಇವನು + ಎಂದನನು. ಒಂದೊಂದು ಅವಯವದಲ್ಲಿಯೂ ಈಶ್ವರನ ಲೀಲೆಯನ್ನು ಭಾವಿಸಿಕೊಳ್ಳಬೇಕು.

ಓವಿ ತಿಸುಳಿಯ ಪಿಡುಗ । ವಾ ವಜ್ರವಭಯವ ।
ನ್ನೀವ ಪರಶುವ ಬಲದ ಭಾಗದಲ್ಲಿ ॥
ಶೀವಿ ಪೊಳೆವಂಕುಶವ । ಹಾವ ಹಗ್ಗವ ಗಂಟೆ।
ಯಾವರಿಪ ದಳ್ಳುರಿಯ ನೆಡಗಡೆಯಲಿ ॥ ೭೪ ॥

ಪೇವ ಬಿಸವನು ಗಳದೊ । ಳೈವಗೆಯ ಮೊಗದೊಳುಂ ।
ಠೀವಿಯಲಿ ಮೂರುಮೂರಾಲಿಗಳನು ॥
ಪವೊತ್ತು ಶಿರದೊಳೀ । ತಾವು ಗೊಂಡಿರುವ ಪೆರೆ ।
ಯೀ ವಿಧವ ಭಾವಿಸೆಂದಗೆ ಬಾಗಿಪೆ ॥ ೭೫ ॥

೭೪-೭೫. ಈ ಎರಡು ಪದ್ಯಗಳಲ್ಲಿ ಭಕ್ತರಕ್ಷಣೆಗಾಗಿ ಪರಮೇಶ್ವರನು ಧರಿಸಿರುವ ಆಯುಧಗಳನ್ನೂ ದುಷ್ಟದಮನಕ್ಕಾಗಿ ಹೊತ್ತಿರುವ ವೇಷವನ್ನೂ ವರ್ಣಿಸಿದೆ.

ಓವಿ - ಪ್ರೀತಿಯಿಂದ ; ತಿಸುಳಿ - ತ್ರಿಶೂಲ ; ತೀವಿ - ವ್ಯಾಪಿಸಿ ; ದಳ್ಳುರಿ- ಹಬ್ಬಿದ ಉರಿ ; ಬೇವ ಬಿಸ - ಸುಡುತ್ತಿರುವ ವಿಷ ; ಗಳ-ಕಂಠ ; ಐವಗೆಯ ಮುಖ - ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ - ಎಂಬ ಐದು ಬಗೆಯ ಮುಖ ; ಆಲಿಗಳನ್ನು - ಕಣ್ಣುಗಳನ್ನು ; ಏವೊತ್ತು - ಯಾವಾಗಲೂ ; ತಾವುಗೊಂಡಿರುವ - ಆಶ್ರಯಿಸಿರುವ ; ಪೆರೆ - ಚಂದ್ರ.

ನಂಟು ಮನೆ ಮಕ್ಕಳಿಂ । ದಂಟದಿರೆ ಸಂಗ ಗಿಡು ।
ಗೆಂಟೆಗಳ ಪಣ್ತೊವಲೆ ತಣಿವೀವುದ ॥
ಮಂಟೆವನೆ ತೊವಲುಡೆಯ । ನೆಂಟು ದೆಸೆಯೊಳು ತೋರ್ಪು ।
ದುಂಟಿದನು ನೆನೆಯೆಂದನಡಿವಿಡಿಯುವೆ ॥ ೭೬ ॥

೭೬. ಅಂಟದಿರೆಸಂಗ - ಆಸಕ್ತಿಯುಂಟಾಗದ ಹಾಗೆ ; ತೊವರೆ - ತೊಗಟೆಯೆ ; ತಣಿವು - ತೃಪ್ತಿ ; ಮಂಟೆ - ಸ್ಮಶಾನ ; ತೊವಲುಡೆ - ಚರ್ಮದ ಉಡುಪು.

ಬಂಧುಗಳಲ್ಲಾಗಲಿ ಮನೆಯಲ್ಲಾಗಲಿ ಮಕ್ಕಳಲ್ಲಾಗಲಿ ಆಸಕ್ತಿಯಿಲ್ಲದೆ ಇದ್ದರ ಗಿಡಮರಗಳ ಹಣ್ಣು ತಿಂದು ತೊಗಟೆಯನ್ನು ಹೊದ್ದಿದ್ದರೂ ತೃಪ್ತಿ ಯಾಗುವದು - ಎಂಬುದನ್ನು ಶಿವನು ಎಂಟು ದಿಕ್ಕಿನಲ್ಲಿಯೂ ತೋರಿಸುತ್ತಿರುವನು.

ಸೊನ್ನೆವೆಟ್ಟಿರೆ ಕೈಯೊ । ಳಿನ್ನುಳಿದ ದೇವರ್ಕಳ ।
ಳನ್ನೆ ಪೊರೆವೈಸಿರಿಯು ತನ್ನದಿರಲು ॥
ಪೊನ್ನೊಡೆಯ ಗೆಳೆಯ ಬಾ । ವನ್ನ ವೆನೆ ಬೂದಿದಳೆ ।
ದುನ್ನತದ ವಿರತಿಯೊರೆದಂಗೆ ಮಣಿವೆ ॥ ೭೭ ॥

ಸೊನ್ನೆವಟ್ಟು - ಚಿನ್ನದ (ಮೇರು) ಪರ್ವತ ; ಐಸಿರಿ - ಐಶ್ವರ್ಯ ; ಪೊನ್ನೊಡೆಯ ಗೆಳೆಯ - ಕುಬೇರನ ಸ್ನೇಹಿತ ; ಬಾವನ್ನ - ಚಂದನ.

ಜೀವರಿಗೆ ವೈರಾಗ್ಯವನ್ನು ಬೋಧಿಸುವದಕ್ಕಾಗಿ ಈಶ್ವರನು ತನಗೆ ಬೇಕಾದ ಐಶ್ವರ್ಯವಿದ್ದರೂ ಸ್ಮಶಾನವಾಸ, ಚರ್ಮವಸನ, ವಿಭೂತಿ- ಇವುಗಳನ್ನು ಅಂಗೀಕರಿಸಿರುತ್ತಾನೆ.

**ಅಳಿಯಾಸೆ ಮೂರನೆಯ । ತಿಳಿವುಗಣ್ಣಿಂದಲ್ಲ ।**
**ದಳಿಯದಿನ್ನೊಂದು ಸಾಧನದಿ ನೆನುತ ।**
**ತಿಳುಹಿ ಕಾಮನನು ಮ । ಣ್ಮಳಿಪೋಗೆ ಚುರ್ಚಿದಿಂ ।**
**ಗಳಗಣ್ಣ ಭಾವಿಸೆಂದಗೆ ಬಾಗುವೆ ॥ ೭೮ ॥**

೭೮. ಮಣ್ಮಳಿಪೋಗೆ - ನಾಶವಾಗುವಂತೆ ; ಚುರ್ಚಿದ - ಸುಟ್ಟ ; ಇಂಗಳಗಣ್ಣ - ಅಗ್ನಿ ನೇತ್ರನನ್ನು ; ಬಾಗುವೆ - ನಮಸ್ಕರಿಸುವೆ.

ಎಲ್ಲರಿಗೂ ಇರುವ ಎರಡು ಚರ್ಮದ ಕಣ್ಣುಗಳು ಕಾಮವನ್ನುಂಟು ಮಾಡುವವು ಜ್ಞಾನವೆಂಬ ಮೂರನೆಯ ಕಣ್ಣು ಬಂದರೆ ಕಾಮವನ್ನು ಸುಡಬಹುದು. ಎಂಬುದನ್ನು ಶಿವನ ಮೂರನೆಯ ಕಣ್ಣು ಸೂಚಿಸುವದು.

**ತಾರಿದನ ನೇರಿದನ । ಮೀರುವೆಳಗುಳ್ಳನನು ।**
**ಮಾರಯ್ಯಲಂತೆ ಕರೆಯೊಂದಿರ್ಪನ ॥**
**ಓರಂತೆ ಶರಣನಂ । ಗೌರವಿಪ ಪೆರನೊಸಲ ।**
**ಸಾರಿ ಭಜಿಸೆಂದ ಗುರುಗಭಿನಮಿಸುವೆ ॥ ೭೯ ॥**

೭೯. ತಾರಿದನ - ಕೃಶನಾದವನನ್ನು ಏರಿದನ- ವೃದ್ಧಿಯಾದವನನ್ನು; ಮೀರುವೆಳಗು- ಪೂರ್ಣಪ್ರಕಾಶ ಕರೆಯೊಂದಿರ್ಪನ - ಕಲಂಕವುಳ್ಳವನನ್ನು ಓರಂತೆ - ಒಂದೇ ಸಮನಾಗಿ ; ಪೆರನೊಸಲ - ಚಂದ್ರನಿರುವ ಹಣೆಯನ್ನು.

ವೃದ್ಧಿ, ಕ್ಷಯ, ಕಲಂಕ- ಇವುಗಳಾವುವನ್ನೂ ನೋಡದೆ ಭಕ್ತರೆಂದ ಮಾತ್ರದಿಂದಲೇ ಈಶ್ವರನು ಗೌರವಿಸುವನೆಂಬುದನ್ನು ಚಂದ್ರಶೇಖರತ್ವವು ಸೂಚಿಸುವದು.

ಹರಿಚರಣಂ ಬಿಟ್ಟು । ಪರಿಯುತಾಗಸದೆ ಜೀ ।
ವರ ಸೊಗದ ಜೀವನಕೆ ತಾನೆಳಸದೆ ॥
ಬರುಹಮ್ಮನೊಳಕೊಂಡ । ಸುರಗಂಗೆಯನು ಜಡೆಯ ।
ಲಿರೆ ಬಿಗಿದನೆಡೆತೋರ್ದ ಗುರುಗೆರಗುವೆ ॥ ೮೦ ॥

೮೦. ಆಗಸದೆ ಪರಿಯುತ - ಆಕಾಶದಲ್ಲಿ ಹರಿದಾಡುತ್ತಾ ; ಸೊಗದ ಜೀವನಕೆ - ಸುಖವಾದ ನೀರಿಗೆ (ಜೀವನಕ್ಕೆ) ; ಎಳಸದೆ - ಪ್ರಯತ್ನಮಾಡದೆ ; ಜಡೆಯಲಿರೆ - ಜಡೆಯಲ್ಲಿ ನಿಲ್ಲುವ ಹಾಗೆ.

ಅಹಂಕಾರಿಗಳನ್ನು ಈಶ್ವರನು ಕಟ್ಟಿಹಾಕುವನೆಂಬುದನ್ನು ಗಂಗಾಧರತ್ವವು ಸೂಚಿಸುತ್ತದೆ.

ನಸುನಗೆಯ ತಂಗದಿರ । ಮಸಕದಿಂದಲೆ ಹೊಳೆವ ।
ಸಸಿಮೊಗದ ಚಲುವನೆಣ್ದೆಸೆಗೆ ಚೆಲ್ವ ॥
ಹುಸಿಮೆಯ್ಯ ಕಾಮಕೋ । ಟಿ ಸಮಾನ ಸುಂದರತೆ ।
ಯೊಸಗೆಯನೆ ಭಾವಿಸೆಂದನ ಭಜಿಸುವೆ ॥ ೮೧ ॥

೮೧. ತಂಗದಿರ- ಬೆಳದಿಂಗಳಿನ ; ಮಸಕ - ವ್ಯಾಪ್ತಿ ಸಸಿಮೊಗ - ಚಂದ್ರಮುಖ ; ಎಣ್ದೆಸೆ - ಎಂಟು ದಿಕ್ಕು ; ಹುಸಿಮೆಯ್ಯ - ಮಾಯಾಶರೀರದ ; ಒಸಗೆ - ಮಂಗಳದ ಸುದ್ದಿ.

ಈಶ್ವರನು ತನ್ನ ಲೀಲೆಯಿಂದ ಶಾಂತವಾಗಿಯೂ ಸುಂದರವಾಗಿಯೂ ಇರುವ ಶರೀರವನ್ನು ಧರಿಸಿರುವಂತೆ ಭಾವಿಸಿಕೊಳ್ಳಬೇಕು.

ಕಡು ಮುದುಪರಾದ ಕಿ । ತ್ತಡಿಗಳೆಲ್ಲರು ಮಾಲ ।
ಗಿಡುವಿನೆಡೆಯೊಳು ಕುಳಿತು ಸೇವಿಸುತಿರೆ ॥
ಇಡಿವ ಸಂದೆಯಗಳನು । ಕುಡಿನೋಟದಿಂ ಕಳೆವ ।
ನಡುವರೆಯ ನಡಿವಿಡಿಸಿದನ ನಮಿಸುವೆ ॥ ೮೨ ॥

ಕಿತ್ತಡಿ - ಋಷಿ ಇಡಿವ- ಹೆಚ್ಚಾದ ಸಂದೆಯ - ಸಂದೇಹ ;

ನಡುವರೆಯುನ -ಯೌವನದ ದಕ್ಷಿಣಾಮೂರ್ತಿಯ ಅಡಿವಿಡಿಸಿದ - ಪಾದವನ್ನು ಹಿಡಿಸಿದಾತನನ್ನು.

ದಕ್ಷಿಣಾಮೂರ್ತಿಯ ರೂಪದಲ್ಲಿ ಈಶ್ವರನು ಅತ್ಯಂತವೃದ್ಧರಾದ ಋಷಿಗಳಿಗೆಲ್ಲ ತತ್ತೋಪದೇಶವನ್ನು ಮಾಡಿರುವನು.

ಕುಡಿಮೀಸೆ ಕುಣಿಯಲು । ಗ್ಗಡದ ಬಿರುನಗೆ ಬೀರೆ ।
ನಡುನೆತ್ತಿಗಣ್ಣುರಿಯನುಗುಳುತಿರಲು ॥
ಸಿಡಿಯಲಣ್ಣೆಸೆಗೆ ಕೆಂ । ಜಡೆ, ಕುಣಿವ ರುದ್ರನಡಿ ।
ವಿಡಿಬಗೆಯೊಳೆಂದ ಬಲಗೆ ಬಾಗುವೆ ॥ ೮೩ ॥

೮೩. ಉಗ್ಗಡ - ಉತ್ಕಟ ; ಬಗೆಯೊಳು - ಮನಸ್ಸಿನಲ್ಲಿ ; ಬಲ್ಲ - ಜ್ಞಾನಿ.

ಹಿಂದಿನ ಪದ್ಯಗಳಲ್ಲಿ ಸಾಂಬಸದಾಶಿವ, ಪಂಚಾನನ, ದಕ್ಷಿಣಾಮೂರ್ತಿ- ಈ ರೂಪಗಳನ್ನು ಧ್ಯಾನಕ್ಕೆ ಹೇಳಿತ್ತು ; ಇಲ್ಲಿ ಪ್ರಲಯಕಾಲದ ರುದ್ರರೂಪವನ್ನು ತಿಳಿಸಿದೆ. ಈಶ್ವರನಿಗೆ ನಿಜವಾಗಿ ರೂಪವೇ ಇಲ್ಲ ; ಅಥವಾ ಎಲ್ಲಾ ರೂಪಗಳೂ ಅವನವೇ. ಆದ್ದರಿಂದ ತನ್ನ ಧ್ಯಾನಕ್ಕೆ ತಕ್ಕ ಯಾವುದಾದರೊಂದು ರೂಪವನ್ನು ಆರಿಸಿಕೊಂಡು ನಿಷ್ಠೆಯಿಂದ ಭಜಿಸಬೇಕು. ಒಂದು ರೂಪವನ್ನು ಬಿಟ್ಟು ಮತ್ತೊಂದು ರೂಪವನ್ನು ಧ್ಯಾನಿಸುತ್ತಾ ಹೋಗಬಾರದು ; ಏಕೆಂದರೆ ಆಗ ಮನಸಿಗೆ ವಿಕ್ಷೇಪವೇ ಆಗುವುದು.

ಶಾಂತಘೋರಂಗಳಿಂ । ದಿಂತೆರಳ್ಕೆಯ್ಯು ಶಿವ ।
ನಾಂತು ತನ್ನಿಚ್ಛೆಯಿಂ ಪರಿವಿಡಿಯಲಿ ॥
ಸಂತರ್ಗೆ ಪಾಪರ್ಗೆ । ತಾಂ ತೋರ್ಪನೆಂದ ಗುರು ।
ವಂತರಂಗದೆ ನೆಲೆಸುವಂತೆ ಬಗೆವೆ ॥ ೮೪ ॥

೮೪. ಎರಳ್ಕೆಯ್ಯ- ಎರಡು ಬಗೆಯ ಆಕಾರವನ್ನು ಆಂತು - ಸ್ವೀಕರಿಸಿ ; ಪರಿವಿಡಿ - ಕ್ರಮ.

ಸತ್ಪುರುಷರಿಗೆ ಶಾಂತನು, ಪಾಪಿಗಳಿಗೆ ಘೋರನು - ಎಂದು ರುದ್ರ

ರೂಪವನ್ನು ಧ್ಯಾನಿಸಬೇಕು.

**ಭೀಕರಾಕೃತಿಯ ಕಂ । ಡೇಕೆ ಬೆದರುವೆ? ಶಿವನು ।**
**ಶೋಕಭಯದೂರನಾಗನೆ ಶರಣಗೆ ? ॥**
**ಸಾಕದೇಂ ಸಿಂಗ ತ । ನ್ನಾ ಕಿಶೋರವ ? ಭಯವ ।**
**ನೂಕೆಂದನಡಿಮಲರ ಬಂಡುಣಿಯನೆ ॥ ೮೫ ॥**

೮೫. ಸಿಂಗ-ಸಿಂಹ ; ಕಿಶೋರ - ಮರಿ ; ಅಡಿಮಲರ - ಪಾದವೆಂಬ ಹೂವಿನ ; ಬಂಡುಣಿ - ಭ್ರಮರ.

ಈಶ್ವರನು ಎಷ್ಟು ಭೀಕರನಾಗಿದ್ದರೂ ತನ್ನ ಭಕ್ತರ ಶೋಕವನ್ನೂ ಭಯವನ್ನೂ ತೊಲಗಿಸಿ ಅವರನ್ನು ಕಾಪಾಡುವನು. ದುಷ್ಟಮೃಗಗಳೂ ತಮ್ಮ ಮಕ್ಕಳಲ್ಲಿ ಪ್ರೇಮವನ್ನು ತೋರುತ್ತವೆ ; ಅವುಗಳ ಮರಿಗಳಿಗೆ ತಾಯಿ ತಂದೆಗಳಲ್ಲಿ ಪ್ರೀತಿಯಾಗುವದೇ ಹೊರತು ಭಯವಾಗುವದಿಲ್ಲ. ಇದರಂತೆ ಪರಮೇಶ್ವರನ ರುದ್ರರೂಪವನ್ನು ನಾವು ಭಾವಿಸಬೇಕು ನೋಡುವದಕ್ಕೆ ಉಗ್ರವಾಗಿದ್ದರೂ ಹೃದಯದಲ್ಲಿ ಪ್ರೇಮವೇ ಇರುವದೆಂಬುದು ಇಲ್ಲಿ ತಿಳಿಯಬೇಕಾದದ್ದು.

**ಒಬ್ಬನಲ್ಲದೆ ದೇವ । ರಿಬ್ಬರೊಳರೇ ಜಗಕೆ ? ।**
**ನಿಬ್ಬರದಿ ಮನದಂದು ನೋಡು ನೀನು ॥**
**ಸಬ್ಬಾಣಿಯೊಡೆಯ ಭಯ । ದುಬ್ಬಟೆಗೆ ಭಯನಾಶ ।**
**ಕೊಬ್ಬನೇ ಮೂಲವೆಂದಗೆ ಮಣಿವೆನು ॥ ೮೬ ॥**

೮೬. ಒಳರೆ-ಇದಾರೆಯೆ ; ನಿಬ್ಬರದಿ - ನಿರ್ಭರದಿಂದ, ತತ್ಪರನಾಗಿ ; ಮನದಂದು - ಯೋಚಿಸಿ ; ಸಬ್ಬಾಣಿ - ಪಾರ್ವತಿ . ಉಬ್ಬಟೆ - ಏರುವಿಕೆ.

ಭಯವನ್ನುಂಟುಮಾಡುವವನೂ ಭಯವನ್ನು ಹೋಗಲಾಡಿಸುವವನೂ ಒಬ್ಬನೇ ದೇವರು.

ಅವ ದೇವದೇವ ಮ । ತ್ತವನೆ ಪಿರಿತಿನಿಯಾಣ್ಮ ।
ನವನೆ ಸಗ್ಗಕೆ ನರಕಕವನೆ ಹಾದಿ ॥
ಅವ ಸಾಧ್ವಸಾಧು ಕ । ರ್ಮವನಾಗಿಸುವ ದೇವ ।
ನವನಲ್ಲದಿಲ್ಲೆಂದನಡಿಗೆ ಬೀಳ್ವೆ ॥ ೮೭ ॥

೮೭. ಪಿರಿತಿನಿಯಾಣ್ಮ - ಪಿಶಾಚಿಗಳೊಡೆಯ ; ಸಗ್ಗ - ಸ್ವರ್ಗ ; ಸಾಧ್ವಸಾಧು - ಒಳ್ಳೆಯ ಕೆಟ್ಟ.

ಒಳ್ಳೆಯದಕ್ಕೊಂದು ಮೂಲ, ಕೆಟ್ಟದಕ್ಕೊಂದು ಮೂಲ- ಎಂದು ಜಗತ್ಕಾರಣಗಳು ಎರಡಿಲ್ಲ. ಅವನು + ಅಲ್ಲದೆ + ಇಲ್ಲ - ಅವನನ್ನು ಬಿಟ್ಟರೆ ಬೇರೆ ಇಲ್ಲ.

ಹರಿಹರಬ್ರಹ್ಮನೆಂ । ದಿರವು ಮೂದೆರೆನವಗೆ ।
ದೊರೆವೆತ್ತ ಗುಣಕರ್ಮಭೇದದಿಂದ ॥
ಬರಿದೆ ಮೋಸವ ಹೋಗ । ದಿರು ಭೇದಬುದ್ಧಿಯನು ।
ತೊರೆಯೆಂದನಡಿಯೂಳಿಗವ ಪಾರ್ವೆನು ॥ ೮೮ ॥

೮೮. ಇರವು-ಸ್ಥಿತಿ ; ದೊರೆವೆತ್ತ - ಪ್ರಸಿದ್ಧವಾದ ; ಗುಣಕರ್ಮ - ಸತ್ತ್ವರಜಸ್ತಮೋಗುಣಗಳು ಮತ್ತು ಸೃಷ್ಟಿಸ್ಥಿತಿಲಯಗಳು ; ಊಳಿಗ- ಸೇವೆ ; ಪಾರ್ವೆನು - ನಿರೀಕ್ಷಿಸುವೆನು.

ಬೇರೆ ಬೇರೆ ಗುಣಗಳನ್ನು ಅವಲಂಬಿಸಿ ಒಬ್ಬ ಈಶ್ವರನೇ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತಿರುವನು.

ಜನನದೊಳು ಭವನು, ಸುಖ । ಜನನದೊಳು ಮೃಡನು, ಮೇಣ್ ।
ಹನನದೊಳು ಹರನು, ಜಗಕೀ ದೇವನು॥
ಗುಣಮೂರ ಮೀರ್ದ ಶಿವ । ನೆನಿಸುವನು ನೆನೆಸಿವನ ।
ತನುವನೆಂದನ ನೊಂದಿ ಸೊಗವಾಳುವೆ ॥ ೮೯ ॥

೮೯. ಸುಖಜನನ - ಸ್ಥಿತಿಯಲ್ಲಿ ಸುಖವನ್ನುಂಟುಮಾಡುವದು ;

ಹನನ ಪ್ರಲಯದಲ್ಲಿ ಸಂಹಾರಮಾಡುವದು ಗುಣಮೂರ ಸತ್ತ್ವರಜಸ್ತಮೋಗುಣಗಳನ್ನು ; ಸೊಗವಾಳುವೆ - ಸುಖವಾಗಿ ಬದುಕುವೆನು.

ಭವ, ಮೃಡ, ಹರ, ಶಿವ - ಈ ಹೆಸರುಗಳಲ್ಲಿ ಮೊದಲನೆಯ ಮೂರು ಸತ್ತ್ವಾದಿಗುಣಗಳನ್ನೂ ಸೃಷ್ಟ್ಯಾದಿಕರ್ಮಗಳನ್ನೂ ಹೇಳುವವು, ಶಿವ ಎಂಬುದು ಶುದ್ಧರೂಪವನ್ನು ಹೇಳುವದು. ಶಿವಮಹಿಮ್ನಸ್ತೋತ್ರವನ್ನು ನೋಡಿ.

ಎಲ್ಲರಲ್ಲಿರುವ ನೇಂ । ನಿಲ್ಲನೇ ನಿನ್ನೊಳಗೆ ? ।
ಮೆಲ್ಲೆದೆಯ ನಿನ್ನರ್ಚನೆಯ ಕೊಳ್ಳನೆ ? ॥
ಬಲ್ಲನಿತು ಜಾನಿಸಿ । ನ್ನಿಲ್ಲಿಯೇ ಕೈಸೇರ್ದು ।
ದೆಲ್ಲ ಸುಖವೆಂದಂಗೆ ಶಿರಬಾಗುವೆ ॥ ೯೦ ॥

೯೦. ಮೆಲ್ಲೆದೆಯ - ಮೃದುಹೃದಯನು.

ಈಶ್ವರನು ಸರ್ವವ್ಯಾಪ್ತಿಯೂ ದಯಾಮಯನೂ ಆಗಿರುವದರಿಂದ ನಾವು ಮಾಡುವ ಮಾನಸಪೂಜೆಯನ್ನು ಕೈಕೊಂಡು ಭೋಗಮೋಕ್ಷಗಳೆರಡನ್ನೂ ಕೊಡುತಾನೆ.

ಪಾದ್ಯವರ್ಘ್ಯಾಚಮನ । ಹೃದ್ಯ ಗಂಗಾಸ್ನಾನ ।
ವಿದ್ಯುತ್ತಿನೆಸಕದಾ ಚಲ್ವ ವಸನ ॥
ಎದ್ದೆಸೆವ ಗಂಧವು । ಪ್ಪಾದ್ಯಖಿಲಪರಿಮಳವ ।
ಬಾಧ್ಯಭಕುತಿಯೊಳಿಟ್ಟ ಧೂಪದೀಪ ॥ ೯೧ ॥
ಖಾದ್ಯಪೇಯಾದಿ ನೈ । ವೇದ್ಯನೀರಾಜನವು ।
ವಾದ್ಯಾದಿಗಳ ಮೇಳ ಮಂತ್ರಪುಷ್ಪ ॥
ಸದ್ಯೋನಮಸ್ಕಾರ । ಶುದ್ಧೋಪಚಾರವೀ ।
ಪದ್ಧತಿಯನರುಹಿದನ ನಿರುತ ಪೊಗಳ್ವೆ । ೯೨

೯೧-೯೨. ಹೃದ್ಯ - ಮನೋಹರ ; ವಿದ್ಯುತ್ತಿನೆಸಕ - ಮಿಂಚಿನ

ಹೊಳವು ; ಏದ್ವೆಸೆವ - ಬಹಳ ಹೊಳೆಯುವ ; ಅಬಾಧ್ಯಭಕುತಿ - ನಿಶ್ಚಲಭಕ್ತಿ ; ಸದ್ಯೋನಮಸ್ಕಾರ - ಕೂಡಲೆ ಆದರದಿಂದ ನಮಸ್ಕರಿಸುವದು ; ಶುದ್ಧೋಪಚಾರ- ಮನಃಶುದ್ಧಿಯಿಂದ ಕಲ್ಪಿಸಿದ ಛತ್ರಚಾಮರಾದಿಗಳು.

ಪಾದ್ಯ ಮುಂತಾದವು ಸಮಂತ್ರಕವಾಗಿ ಮಾಡುವ ದೇವರ ಪೂಜೆಯಂತೆ ಮಾಡುವ ಕರ್ಮವಲ್ಲ ; ಕಾಲು ತೊಳೆಯುವದು, ಕೈಗೆ ನೀರು ಕೊಡುವದು, ಸ್ನಾನ ಮಾಡಿಸುವದು - ಮುಂತಾದ ಕಾರ್ಯಗಳೆ. ಬಾಹ್ಯದಲ್ಲಿ ಪ್ರತಿಮೆ ಮೊದಲಾದವುಗಳಿಗೆ ಪೂಜ್ಯಬುದ್ಧಿಯಿಂದ ಅರ್ಪಿಸುವ ಪೂಜೆಯನ್ನು ಈಶ್ವರನೇ ತನ್ನೆದುರಿಗೆ ಬಂದಂತೆ ಭಾವಿಸಿ ಮನಸ್ಸಿನಲ್ಲಿ ನಡೆಸಬೇಕು ಎಂಬುದೇ ಮೇಲಿನೆರಡು ಪದ್ಯಗಳ ತಾತ್ಪರ್ಯ.

ಭಾವದೊಳೆ ಕಲ್ಪಿಸಿದ । ಸೇವೆಯನೆ ಕೈಕೊಂಡು ।
ದೇವದೇವನು ನಲಿವ ಸಿಜವಿ ನೋಡೆ ॥
ಭಾವವಿಲ್ಲದ ಪೂಜೆ । ಬೇವಹುದು ಭವಗೆಂದ ।
ಭಾವಿತಾತ್ಮನ ಭಕುತಿಯಿಂದ ಭಜಿಪೆ ॥ ೯೩ ॥

೯೩. ಭಾವ-ಮನಸ್ಸು ; ಬೇವಹುದು - ಬೇವಿನಂತೆ ಕಹಿಯಾಗುವದು ; ಭಾವಿತಾತ್ಮ - ಪೂಜಿತಸ್ವರೂಪ.

ಈಶ್ವರನಿಗೆ ಪೂಜಾಸಾಮಗ್ರಿ ಮುಖ್ಯವಲ್ಲ, ಪ್ರೇಮದಿಂದ ಕೂಡಿದ ಮನಸ್ಸೇ ಮುಖ್ಯ ; ಅದ್ದರಿಂದ ಮಾನಸಪೂಜೆಗೇ ಒಲಿಯುವನು.

ನೋಡು ಮನದಣಿಯೆ, ಕೊಂ । ಡಾಡು ಗುಣಕರ್ಮಗಳ ।
ಹಾಡಿಕುಣಿದಾಡು, ನೀ ಭಕುತಿಯಿಂದ ॥
ಬೇಡು ಮನದಿಷ್ಟವನು । ನಾಡೆ ಪದಯುಗವ ಮು ।
ದ್ದಾಡಿ ಸುಖಿಸೆಂದನಬಿಸಾರಿ ಬಾಳ್ವೆ ॥ ೯೪ ॥

೯೪. ನಾಡೆ - ಚೆನ್ನಾಗಿ.

ತ್ರಿಕರಣಗಳನ್ನೂ ಈಶ್ವರನಿಗೆ ಅರ್ಪಿಸಿ ಭಜಿಸಬೇಕು.

**ಪದೆದಪ್ಪಿ ಪರಮನಡಿ । ಯೊದವಿನಿಂ ಬಲು ಸೊಗದ ।**
**ಸೊದೆಯ ಸುರಿಸುತ ನೇತ್ರಯುಗಳದಲ್ಲಿ ॥**
**ತುದಿಯೇರ್ದ ಹೊಂಪುಳಿಯ ಗದಗದದ ಸವಿಯುಲಿಯ ।**
**ಮುದವನಾಳೆಂದ ಮಹಿಮನ ವಂದಿಪೆ ॥ ೯೫ ॥**

೯೫. ಪದೆದು- ಪ್ರೀತಿಯಿಂದ ; ಅಡಿಯ + ಒದವು - ಈಶ್ವರನ ಪಾದದ ಪ್ರಾಪ್ತಿ ; ಸೊಗದ ಸೊದೆ - ಸುಖದ ಅಮೃತ, ಆನಂದಬಾಷ್ಪ ; ಹೊಂಪುಳಿ- ರೋಮಾಂಚ, ಮೈ ಕೂದಲು ನೆಟ್ಟಗೇಳುವದು ; ಸವಿಯುಲಿ - ಇಂಪುಮಾತು.

ಈಶ್ವರಭಾವನೆಯಿಂದ ಇಲ್ಲಿ ಹೇಳಿರುವ ಸಾತ್ತ್ವಿಕಭಾವಗಳು ಉಂಟಾಗುವವು.

**ಉರಿವ ಬೆಂಕಿಗೆ ಬೆಣ್ಣೆ । ಕರಗುವಂದದೆ, ಸೂರ್ಯ ।**
**ಕಿರಣಕ್ಕೆ ಮಂಜು ನೀರಿಡುವಂದದೆ ॥**
**ಹರಚರಣನಿಷ್ಠೆಯಿಂ । ಕರಗಿರ್ದ ಚಿತ್ತವನು ।**
**ಹರನೊಳೇ ಬೆರಸೆಂದನಡಿಗೆ ಬೀಳ್ವೆ ॥ ೯೬ ॥**

೯೬. ಭಕ್ತಿಯು ಹೆಚ್ಚಿದಂತೆ ಮನಸ್ಸು ಪರಮಾತ್ಮನಲ್ಲಿ ಲಯವಾಗುವದಕ್ಕೆ ಸಿದ್ಧವಾಗುವದು.

**ಹರನು ಗುರು ತಾನೆಂಬ । ಪರಿಜು ಮೂರರ ಭೇದ ।**
**ದೊರೆಕೊಂಡು ಬೇರೆಬೇರೆನಿಸಿರ್ಪನ ॥**
**ಸರುವರೊಳು ಗಗನದಂ । ತಿರೆ ಬಿಡದೆ ಪರ್ವಿರುವ ।**
**ಪರಮನನು ನುತಿಸೆಂದ ಗುರುವ ನೆನೆವೆ ॥ ೯೭ ॥**

೯೭. ಪರಿಜು- ಆಕಾರ ; ದೊರೆಕೊಂಡು - ಆಗಿ ; ಬಿಡದೆ- ಅಖಂಡ ವಾಗಿ ; ಪರ್ವಿ - ಹಬ್ಬಿ.

ಈಶ್ವರ, ಗುರು, ತಾನು- ಎಂದು ಮೂರು ರೂಪಾಗಿ ಕಾಣುವದು ಆಕಾರದ ಉಪಾಧಿಯಿಂದಲೆಂದೂ ಒಬ್ಬ ಈಶ್ವರನೇ - ಗಡಿಗೆ, ಕುಡಿಕೆ, ಮಡಕೆ ಮುಂತಾದವುಗಳಲ್ಲಿ ಇರುವ ಒಂದೇ ಆಕಾಶದಂತೆ - ಅಖಂಡನಾಗಿರುವ ನೆಂತಲೂ ತಿಳಿದು ಧ್ಯಾನಿಸಬೇಕು.

ಇಂತೆನಗೆ ಬೋಧಿಸಿದ । ಕಂತುಹರ ತನುವೆ ಎ ।
ನ್ನಂತರಂಗದೆ ನಿಂತು ಕರುಣದಿಂದೆ ॥
ಸಂತತವು ನಿನ್ನಯ । ನಿತಾಂತಮಹಿಮೆಯ ನೆನೆಯು ।
ವಂತನುಗ್ರಹಿಸೆನಗೆ ದೇಶಿಕೇಂದ್ರ ॥ ೯೮ ॥

೯೮. ಕಂತುಹರತನುವೆ - ಶಿವಾವತಾರನಾದ ಗುರುವೆ ; ನಿತಾಂತ - ಅತಿಶಯವಾದ ; ದೇಶಿಕೇಂದ್ರ- ಗುರುಶ್ರೇಷ್ಠ.

ಪಾಪಿಯೆನ್ನನುನರಕ । ಕೂಪದಲಿ ಬಿದ್ದು ಬಲು ।
ತಾಪದಿಂದದವಳಲ ಪಡದಂತಿರೆ ॥
ನೀ ಪರಮದಯೆಯಿಂದ । ಕಾಪಿಟ್ಟು ಸನ್ಮಾರ್ಗ ।
ದೀಪವನು ಬೆಳಗಿಸಿದೆ ಹೃದಯದೊಳಗೆ ॥ ೯೯ ॥

೯೯. , ಕೂಪದಲಿ-ಗುಂಡಿಯಲ್ಲಿ ; ಅದವಳಲ-ದುಃಖವನ್ನು ; ಪಡದಂತಿರೆ-ಪಡದ ಹಾಗೆ ; ಕಾಪಿಟ್ಟು - ಕಾಪಾಡಿ.

ಸಂಸಾರದೊಳು ಬಹಳ ಹಿಂಸೆಯನು ಪಡುವನೆ ।
ನ್ನಂಶನಾಗಿಹ ಜೀವನಿವನೆನ್ನುತೆ ॥
ನೀಂ ಸಹಿಸದಿಳಿದು ಪರ । ಹಂಸನಾಗುತೆ ಲೋಕ ।
ಶಂಸಿತನೆ ತಿಳುಹಿದೈ ತತ್ತ್ವಾರ್ಥವ ॥ ೧೦೦ ॥

೧೦೦. ಇಳಿದು - ಅವತರಿಸಿ ; ಲೋಕಶಂಸಿತನೆ - ಎಲ್ಲರಿಂದಲೂ ಹೊಗಳಲ್ಪಟ್ಟಿರುವವನೆ. ಜೀವರ ಸಂಸಾರದುಃಖವನ್ನು ಹೋಗಲಾಡಿಸುವ ದಕ್ಕೇ ಭಗವಂತನ ಅವತಾರ.

ಅವ್ಯಕ್ತರೂಪನಂ । ಸುವ್ಯಕ್ತನೆಂದು ಪರ ।
ಮಾವ್ಯಯನ ಮರ್ತ್ಯನೆಂದರಿತ ತಪ್ಪ ॥
ಭವ್ಯ, ನೀಂ ಮನ್ನಿಸಿ ಮ । ನೋವ್ಯಥೆಯ ನೀಗುವಾ ।
ದಿವ್ಯ ಚಕ್ಷುವನ್ನಿತ್ತು ದಿಟವ ತೋರ್ದೆ ॥ ೧೦೦ ॥

೧೦೦. ಅವ್ಯಕ್ತ-ಇಂದ್ರಿಯಕ್ಕೆ ಗೋಚರವಲ್ಲದ ಭವ್ಯ- ಮಂಗಲ ಸ್ವರೂಪನೆ ; ದಿವ್ಯ ಚಕ್ಷು-ಪರಮಾತ್ಮಸ್ವರೂಪವನ್ನರಿಯುವ ತಿಳಿಗಣ್ಣು.

ಪರಮಾತ್ಮನು ಇಂದ್ರಿಯಗಳಿಗೆ ಮೀರಿದ ನಾಶರಹಿತವಾದ ಸ್ವರೂಪವುಳ್ಳವನೆಂದರಿಯುವದೇ ನಿಜವಾದ ಜ್ಞಾನ

ಉಂಟೆಂಬರಿಲ್ಲೆಂಬ । ರುಂಟಿಲ್ಲವೆಂಬರಡಿ ।
ಸಂಟಿಲ್ಲದಿಹರಲೇ ದೇವ, ನಿನ್ನ ॥
ಭಂಟನನು ಮಾಡಿಕೊಂ । ಡುಂಟಾದ ಸಂಶಯದ
ಗಂಟೊಡೆವ ನಿಜದರಿವನಿತ್ತೆಯೆನಗೆ ॥ ೧೦೧॥

೧೦೧. ಉಂಟೆಂಬರು - ಇದಾನೆನ್ನುತ್ತಾರೆ ಇಲ್ಲೆಂಬರು - ದೇವರಿಲ್ಲವೆನ್ನುತ್ತಾರೆ ಉಂಟಿಲ್ಲವೆಂಬರು- ಒದು ದೃಷ್ಟಿಯಿಂದ ಉಂಟು ಇನ್ನೊಂದು ದೃಷ್ಟಿಯಿಂದ ಇಲ್ಲ ಎನ್ನುವರು. ನಂಶಯಪಡುತ್ತಾರೆ ; ಅಡಿನಂಟು - ಪಾದಭಕ್ತಿ ; ಸಂಶಯದ ಗಂಟು - ನಂಶಯವನ್ನುಂಟುಮಾಡುವ ಅಜ್ಞಾನದ ಬಿಕ್ಕಟ್ಟು.

ಪರಮಾತ್ಮನು ಇದಾನೋ ಇಲ್ಲವೋ ಎಂದು ಬಗೆಬಗೆಯಾಗಿ ಸಂದೇಹಪಡುವದು ಭಕ್ತನಿಗೆ ಮಾತ್ರ ನಿವಾರಣೆಯಾಗುವದು.

ಅರಸಿರ್ದ ಬಳ್ಳಿ ಕಾ । ಲ್ಗುರೆ ತೊಡಕಿದಂತೆ ಬಡ ।
ವರನರಸಿ ಲಕ್ಷ್ಮಿಯೇ ಹರಸಿದಂತೆ ॥
ಗುರುವೆ ನಿನ್ನನು ಕಾಂಬ । ಪರಿಯ ಕಾಣದೆ ಹಲುಬು ।
ತಿರಲೆನಗೆ ಮೈದೋರಿ ಪೊರೆದೆಯೈಸೆ ॥ ೧೦೨ ॥

೧೦೩. ಉರೆ-ಹೆಚ್ಚಾಗಿ, ಬಲವಾಗಿ ; ಹಲುಬು - ದುಃಖಿಪಡು ; ಮೈದೋರಿ- ಸಾಕ್ಷಾತ್ಕಾರವನ್ನು ಕೊಟ್ಟು.

ಶಿಷ್ಯರು ಕಾತರರಾಗಿದ್ದರೆ ಗುರುವೇ ಬಂದು ಅನುಗ್ರಹಿಸುವನು.

ನೀನು ನಾಂ ಜಗವೆಂಬ । ಹೀನಭೇದವ ಹರಿದು ।
ನೀನು ನಾನೆಲ್ಲವುಂ ಶಿವನೆಂಬುವ ॥
ಊನವಿಲ್ಲದ ತತ್ತ್ವ । ಗಾನವನು ಮಾಡಿಸಿದೆ
ದಾನಿ ನಿನು ಪಕೃತಿಯ ಮರೆವೆನೆಂತು ? ॥ ೧೦೪ ॥

೧೦೪. ಊನವಿಲ್ಲದ - ಸಂಪೂರ್ಣವಾದ ; ತತ್ತ್ವ - ಪರಮಾರ್ಥ.

ನೀನಿತ್ತ ದೇಹವಿದು । ನೀನಿತ್ತ ಹರಣವಿದು ।
ನೀನಿತ್ತುದಿಂದ್ರಿಯವು ಮನವು ಬುದ್ಧಿ ॥
ನೀನೆ ಎನ್ನೊಳು ಸೇರಿ । ನಾನೆಂಬ ನವರೂಪ ।
ನಾನುತ್ತೆ ನಾಟಕವ ಹೂಡಿದೆಯಲ ! ॥ ೧೦೫ ॥

೧೦೫. ಹರಣ-ಪ್ರಾಣ ; ಮನಸ್ಸು ಸಂಕಲ್ಪಶಕ್ತಿ ಬುದ್ಧಿ-ನಿಶ್ಚಯಶಕ್ತಿ ; ನಾನೆಂಬ ನವರೂಪ-ಜೀವನೆಂಬ ಹೊಸ ರೂಪವನ್ನು ; ಆನುತ್ತೇ -ಹೊಂದಿ.

ಹೊರಗಿರುವ ಜಗತ್ತೆಲ್ಲ ಶಿವಮಯವೆಂದು ಭಾವಿಸಿದಂತೆಯೇ, ತಾನೂ ತನ್ನ ದೇಹ, ಪ್ರಾಣ, ಇಂದ್ರಿಯ, ಮನಸ್ಸು- ಇವುಗಳೂ ಶಿವಮಯವೆಂದು ಭಾವಿಸಬೇಕು. ನಿಜವಾಗಿ ಶಿವನಿಗಿಂತ ಬೇರೆ ಏನೂ ಇರುವದಿಲ್ಲ. ಶಿವನೂ ಗುರುವೂ ಒಂದೆ.

ನೀನೆ ತಾಯಿಯು ತಂದೆ । ನೀನು ಬಂಧುವು ಬಳಗ ।
ನೀನಣ್ಣತಮ್ಮಂದಿರೆಲ್ಲ ನಿಜದಿ ॥
ನೀನೆ ಸತಿಸುತಮಿತ್ರ । ನೀನೆ ಹೊಲಮನೆಹಣವು ।
ನೀನೆನ್ನ ಸರ್ವಸ್ವ ಗುರುವರ್ಯನೆ ॥ ೧೦೬ ॥

೧೦೬. ನನ್ನದು ಎಂದು ಭಾವಿಸಿದ್ದದ್ದೆಲ್ಲ ಶಿವರೂಪವಾದ್ದರಿಂದ ಅದೆಲ್ಲ ಗುರುರೂಪವೇ.

ನೀನೆ ಬಾಲನು ಯುವಕ ನೀನೆ ಮೆರೆವ ಕುಟುಂಬಿ ।
ನೀನೆ ವಾರ್ಧಕವನನುಭವಿಸುವಾತ ॥
ನೀನೆ ಪುರುಷನು ನಾರಿ । ನೀನೆ ಷಂಡನು ಮೇಣು ।
ನೀನೆ ಸುಂದರನತಿಕುರೂಪಿ ನೀನೆ ॥ ೧೦೭ ॥

೧೦೭. ಷಂಡ-ನಪುಂಸಕ ; ಮೇಣು - ಮತ್ತು.

ನಿಜವಾಗಿ ಪರಮಾತ್ಮವಸ್ತುವಿಗೆ ಯಾವ ಅವಸ್ಥೆಗಳೂ ಇಲ್ಲ. ಎಲ ಅವಸ್ಥೆಗಳೂ ಅದರಲ್ಲಿಯೇ ತೋರುತ್ತಿರುವವು.

ನೀನೆ ವಿಪ್ರ ಕ್ಷತ್ರ । ನೀನೆ ವಿಟ್ಛೂದ್ರ ಮೇಣ್ ।
ನೀನೆ ಚಂಡಾಲಾದಿ ಸಂಕರನಲೆ ॥
ನೀನು ವಟು ಗೃಹಿ ವನಿಯು । ನೀನೆ ಸನ್ನ್ಯಾಸಿಯು ।
ನೀನೆ ಅತಿವರ್ಣಾಶ್ರಮಿಯು ನೋಡಲು ॥ ೧೦೮ ॥

೧೦೮. ಸಂಕರ - ಜಾತಿಯ ಕಟ್ಟಿಲ್ಲದವ ವಟು-ಬ್ರಹ್ಮಚಾರಿ ; ಅತಿವರ್ಣಾಶ್ರಮಿ- ವರ್ಣಾಶ್ರಮಗಳನ್ನು ಮೀರಿರುವ ಜ್ಞಾನಿ.

ಎಲ್ಲಾ ವರ್ಣಾಶ್ರಮಗಳೂ ಆತ್ಮವಸ್ತುವಿನಲ್ಲಿಯೇ ತೋರಿಕೊಳ್ಳುತ್ತಿರುವವು.

ನೀನೆ ಧನಿಯು ದರಿದ್ರ । ನೀನೆ ನೆಲಕಲ ದಾನಿ ।
ನೀನೆ ಶಾಸ್ತ್ರವ್ಯಸನಿ ಜೂದಾಳಿಯು ॥
ನೀನೆ ರಾಜ್ಯ ಪ್ರಕೃತಿ । ನೀನೆ ಬೊಕ್ಕಸ ಸೈನ್ಯ ।
ನೀನೆ ಅರಿ ಮಿತ್ರ ಮಧ್ಯಸ್ಥ ನೀನು ॥ ೧೦೯ ॥

೧೦೯. ಶಾಸ್ತ್ರವ್ಯಸನಿ-ಶಾಸ್ತ್ರಚಿಂತೆಯಲ್ಲಿಯೇ ಕಾಲವನ್ನು ಕಳೆಯುವವ;

ನೆಲಕಲ - ಲೋಭಿ ; ಜೂದಾಳಿ - ಜೂಜುಗಾರ ; ಪ್ರಕೃತಿ - ಪ್ರಜೆ ; ಬೊಕ್ಕಸ - ಖಜಾನೆ.

ಹೆಚ್ಚು ಕಡಿಮೆ ಎಂದು ತೋರುವ ಭೇದವೆಲ್ಲ ಪರಮಾತ್ಮನಲ್ಲಿಯೇ ತೋರುತ್ತಿರುವದು.

ನೀನೆ ಗಿಡುಮರಬಳ್ಳಿ । ನೀನೆ ಪಶುಮೃಗಪಕ್ಷಿ ।
ನೀನೆ ಭೂತಪ್ರೇತವೇತಾಳನು ॥
ನೀನೆ ರಾಕ್ಷಸಯಕ್ಷ । ನೀನೆ ವಿದ್ಯಾಧರನು ।
ನೀನೆ ಗಂಧರ್ವಕಿನ್ನರಮುಖ್ಯರು ॥ ೧೧೦ ॥

ನೀನೆ ಭೂತವು ಭುವನ । ನೀನೆ ವನಪರ್ವತವು ।
ನೀನೆ ನದಿಕಾಸಾರಸಾಗರಗಳು ॥
ನೀನೆ ನಗರ ಗ್ರಾಮ । ನೀನೆ ಹರ್ಮ್ಯ ಕುಟೀರ ।
ನೀನೆ ಮುನಿಗಳ ವಾಸದೆಲೆವನೆಗಳು ॥ ೧೧೧ ॥

೧೧೦-೧೧೧. ಭೂತವು-ಪಂಚಭೂತಗಳು ; ಭುವನ-ಹದಿನಾಲ್ಕು ಲೋಕಗಳು ; ಹರ್ಮ್ಯ-ದೊಡ್ಡವರ ಮನೆ ; ಎಲೆವನೆ -ಪರ್ಣಶಾಲೆ.

ನೀನೆ ಲೋಕಗಳೆಲ್ಲ । ನೀನೆ ಲೋಕಾಧಿಪರು ।
ನೀನೆ ಅಧ್ಯಾತ್ಮಾಧಿಭೂತರೂಪ ॥
ನೀನೆ ಅಧಿದೈವ ಮೇಣ್ । ನೀನೆ ತತ್ತ್ವಗಳೆಲ್ಲ ।
ನೀನಲ್ಲದಿಲ್ಲ ಸದ್ಗುರುರಾಯನೆ ॥ ೧೧೨ ॥

೧೧೨. ಅಧ್ಯಾತ್ಮ-ನಮ್ಮೊಳಗಿನದು ; ಅಧಿಭೂತ-ಹೊರಗಿನದು ; ಅಧಿದೈವ- ಇವೆರಡಕ್ಕೂ ಸಂಬಂಧವನ್ನುಂಟುಮಾಡುವ ಸೂರ್ಯಚಂದ್ರಾದಿಗಳು ; ತತ್ತ್ವಗಳು - ಪ್ರಧಾನ, ಮಹತ್ತು, ಅಹಂಕಾರ, ತನ್ಮಾತ್ರೆಗಳು, ಇಂದ್ರಿಯಗಳು, ಭೂತಗಳು, ಪುರುಷ.

ನೀನೆ ಧರ್ಮಪಧರ್ಮ । ನೀನೆ ಕರ್ಮವು ಫಲವು ।
ನೀನೆ ಕಾಲನಿಮಿತ್ತ ದೇಶಾದಿಯು ॥
ನೀನೆ ಕರ್ತೃವು ಭೋಕ್ತೃ । ನೀನೆ ವಿಧಿಯು ನಿಷೇಧ ।
ನೀನೆ ಫಲದಾತೃವೆಲೆ ಗುರುರಾಯನೆ ॥ ೧೧೩॥

೧೧೩. ಆದಿ-ಎಂದರೆ ಅದೃಷ್ಟ ಮುಂತಾದ ಸಾಧಾರಣಕಾರಣ ಫಲದಾತೃ- ಈಶ್ವರ.

ಕರ್ಮವು ಫಲಕ್ಕೆ ಬರಬೇಕಾದರೆ ಕಾಲಾದಿಗಳು ಬೇಕು. ಇವೆಲ್ಲ ಪರಮಾತ್ಮ ಸ್ವರೂಪವೆ.

ನೀನೆ ವೇದವು ನೋಡೆ । ನೀನೆ ವೇದಾಂಗಗಳು ।
ನೀನೆ ವಿದ್ಯಾಸ್ಥಾನವೆಲ್ಲ ನಿಜದಿ ॥
ನೀನೆ ವಿದ್ಯೆಯವಿದ್ಯೆ । ನೀನೆ ಬುದ್ಧಿಯಿದೆಲ್ಲ ।
ನೀನಲ್ಲದಿಲ್ಲ ಸದ್ಗುರುರಾಯನೆ ॥ ೧೧೪॥

೧೧೪. ವಿದ್ಯಾಸ್ಥಾನ- ವೇದಾಂಗಗಳು ಮತು ಪುರಾಣನ್ಯಾಯ ಮೀಮಾಂಸಾ ಧರ್ಮಶಾಸ್ತ್ರಗಳು ವಿದ್ಯೆ-ಪರಮಾತ್ಮಜ್ಞಾನ ಅವಿದ್ಯೆ-ಪರಮಾತ್ಮನನ್ನು ತಿಳಿಯದೆ ಇರುವದು, ಮತ್ತು ತಪ್ಪು ತಿಳಿವು.

ನೀನೆ ಸಾಂಖ್ಯವು ಯೋಗ । ನೀನೆ ವೈಶೇಷಿಕವು ।
ನೀನೆ ಆನ್ವೀಕ್ಷಿಕಿಯು ನೋಡಲಂತೆ ॥
ನೀನೆರಡು ಮೀಮಾಂಸ । ನೀನೆ ದರ್ಶನವೆಲ ।
ನೀನಲ್ಲದಿಲ್ಲ ಸದ್ಗುರುರಾಯನೆ ॥ ೧೧೫ ॥

೧೧೫. ಆನ್ವೀಕ್ಷಕಿ - ನ್ಯಾಯವಿದ್ಯೆ ಎರಡು ಮೀಮಾಂಸ - ಧರ್ಮಬ್ರಹ್ಮ ವಿಚಾರದ ಪೂರ್ವೋತ್ತರಮೀಮಾಂಸಗಳು.

ನೀನೆ ಕಣ್ಣಿಗೆ ಕಣ್ಣು । ನೀನೆ ಕಿವಿಗೆಲ್ಲ ಕಿವಿ ।
ನೀನೆ ಮಿಕ್ಕಿಂದ್ರಿಯಕೆ ಮೂಲಭೂತ ॥

ನೀನೆ ಮನಕೆಲ್ಲ ಮನ । ನೀನೆ ಕರಣವಿದೆಲ್ಲ ।
ನೀನಲ್ಲದಿಲ್ಲ ಸದ್ಗುರುರಾಯನೆ ॥ ೧೧೬ ॥

೧೧೬. ಕರಣಗಳಲ್ಲಿರುವ ಚೈತನ್ಯವು ಪರಮಾತ್ಮನದೇ.

ನೀನೆ ಪಾಮರ ವಿಷಯಿ । ನೀನೆ ಮೋಕ್ಷೇಚ್ಛು ಮೇಣ್ ।
ನೀನೆ ಮುಕ್ತನು ನಿಜದಿನಾರಯ್ವೊಡೆ ॥
ನೀನೆ ನಾಸ್ತಿಕನಂತೆ ನೀನೆ ಆಸ್ತಿಕನಪ್ಪೆ ।
ನೀನೆ ವೈದಿಕನು ಸರ್ವಾಗಮಿಕನು ॥ ೧೧೭ ॥

೧೧೭. ನಿಜದಿಂ + ಆರಯ್ವೊಡೆ - ಸರಿಯಾಗಿ ಆಲೋಚಿಸಿದರೆ ; ಸರ್ವಾಗಮಿಕನು - ಶೈವ, ವೈಷ್ಣವ, ಬ್ರಾಹ್ಮ- ಮುಂತಾದ ಆಗಮಗಳನ್ನು ಅನುಸರಿಸುವವ.

ನೀನೆ ಶಿಷ್ಯನು ಗುರುವು । ನೀನೆ ಶಾಸ್ತ್ರವು ವಿದ್ಯೆ ।
ನೀನೆ ಬದ್ಧನು ಮುಕ್ತನಂತೆ ನೀನೆ ॥
ನೀನೆ ಭೇದವಭೇದ । ನೀನೆ ಭೇದಾಭೇದ ।
ನೀನಲ್ಲದಿಲ್ಲ ಸದ್ಗುರುರಾಯನೆ ॥ ೧೧೮ ॥

೧೧೮. ಶಿಷ್ಯ, ಗುರು, ಶಾಸ್ತ್ರ- ಎಂಬ ಭೇದವೂ ಬದ್ಧನು, ಮುಕ್ತನು, ಬಂಧ, ಮುಕ್ತಿ- ಎಂಬ ಭೇದವೂ ಆತ್ಮವಸ್ತುವಿನಲ್ಲಿ ಕಲ್ಪಿತವಾಗಿರುವದು. ಇವುಗಳೆಲ್ಲ ಒಂದೇ ಎಂಬ ಅಭೇದವೂ ಪರಮಾತ್ಮನಲ್ಲಿ ಕಲ್ಪಿತವು.

ನೀನೆ ಜೀವರ ಜೀವ । ನೀನೆ ದೇವರ ದೇವ ।
ನೀನೆ ಭಕ್ತರ ಕಾವ ಮೂಲದೈವ ॥
ನೀನೆ ನಾಮವು ರೂಪ । ನೀನೆ ಸಚ್ಚಿದ್ರೂಪ ।
ನೀನಲ್ಲದಿಲ್ಲ ಸದ್ಗುರುರಾಯನೆ ॥ ೧೧೯ ॥

೧೧೯. ಜಡ, ಜೀವ, ಈಶ್ವರ- ಎಂಬ ಮೂರು ತತ್ತ್ವಗಳೂ ನಿಜವಾಗಿ ಪರಮಾತ್ಮನೇ

ನೀನೆ ಮೇಲಿಹೆ ಕೆಳಗೆ। ನೀನೆ ಎಡಬಲದೊಳಗೆ ।
ನೀನೆ ಹಿಂದೆಯು ಮುಂದೆಯಿರುವೆ ದೇವ॥
ನೀನೊಳಗೆ ಹೊರಗಿರುವೆ । ನೀನೆ ಎಲ್ಲೆಲ್ಲಿಯುಂ ।
ನೀನಲ್ಲದಿಲ್ಲ ಸದ್ಗುರುರಾಯನೆ ॥ ೧೨೦ ॥

೧೨೦. ಸರ್ವವ್ಯಾಪ್ತನೆಂದು ತಾತ್ಪರ್ಯ.

ನೀನೆ ಸಗುಣನು ಮತ್ತೆ । ನೀನೆ ನಿರ್ಗುಣನಂತೆ ।
ನೀನೆ ಸಾಕಾರನಾಕಾರಶೂನ್ಯ ॥
ನೀನೆ ಕಿಂಚಿಜ್ಜ್ಞನಹೆ । ನೀನೆ ಸರ್ವಜ್ಞನಹೆ ।
ನೀನಲ್ಲದಿಲ್ಲ ಸದ್ಗುರುರಾಯನೆ ॥ ೧೨೧ ॥

೧೨೧. ಕಿಂಚಿಜ್ಞ - ಸ್ವಲ್ಪ ತಿಳಿದ ಜೀವ ; ಸರ್ವಜ್ಞ - ಎಲ್ಲವನ್ನೂ ಬಲ್ಲ ಈಶ್ವರ.

ನೀನೆ ಸರ್ವಾಕಾರ । ನೀನೆ ಸರ್ವಾಧಾರ ।
ನೀನೇ ನಿರಾಧಾರ ನಿರ್ವಿಕಾರ ॥
ನೀನೆ ಕರುಣಾಸಾರ । ನೀನೆ ಸಂಸೃತಿಪಾರ ।
ನೀನೆ ಪೇಳಿಸಿದುದೀ ಭಕ್ತಿಸಾರ ॥ ೧೨೨ ॥

೧೨೨. ಸರ್ವಾಕಾರ- ಎಲ್ಲಾ ತೋರಿಕೆಗಳು ; ಸರ್ವಾಧಾರ- ಎಲ್ಲಾ ತೋರಿಕೆಗೂ ಆಧಾರ ; ನಿರಾಧಾರ - ತನಗೆ ಯಾವ ಆಧಾರವನ್ನೂ ಬಯಸದಿರುವವ ; ಸಂಸೃತಿಪಾರ-ಸಂಸಾರದ ಆಚೆಯ ದಡ ; ಮುಕ್ತಿಸ್ವರೂ

ಶಂಕರನ ಮಹಿಮೆಯಿದು । ಶಂಕರವು ಪಾಪನಾ ।
ಶಂ ಕರಂ ಭಕ್ತಿಯಿಂದೋದಿ ಕೇಳೆ ॥
ಶಂಕರನೆ ಪೇಳ್ದನಿದ । ಶಂಕೆಯಿಲ್ಲದೆ ಬರೆದೆ ।
ನಾಂ ಕೃತಿಯ ಸಜ್ಜನರ ಸಮ್ಮೋದಕೆ ॥ ೧೨೩ ॥

೧೨೩. ಶಂಕರವು-ಮಂಗಲಕರವು ; ಕರಂ-ಚೆನ್ನಾಗಿ ; ಪಾಪನಾಶಂ-ಪಾಪವನ್ನು ನಾಶಮಾಡುವದು.

ಪರಮಾತ್ಮನ ಮಾಹಾತ್ಮ್ಯವನ್ನು ತಿಳಿಸುವ ಈ ಗ್ರಂಥವನ್ನು ಓದುವದೂ ಕೇಳುವದೂ ಪಾಪಹರವೂ ಪುಣ್ಯಕ್ಕೆ ಕಾರಣವೂ ಆಗಿರುವದು. ಪರಮಾತ್ಮ ಸ್ವರೂಪವು ಆತನೊಬ್ಬನಿಗೇ ತಿಳಿಯುವದಾದ್ದರಿಂದ ಆತನ ಅನುಗ್ರಹ ದಿಂದಲೇ ಈ ಗ್ರಂಥವು ಹುಟ್ಟಿರುವದೆಂದು ತಿಳಿಯಬೇಕು.

ಮರಹಿನಿಂದಲುಪಾಧಿ । ನೆರೆಯಾಗಿ ಜೀವೇಶ ।
ರೆರಡೆಂಬ ಬುದ್ಧಿಯೇರ್ಪಡುತಲಿಹುದು ॥
ಗುರುರೂಪಿನಿಂದ ಶಿವ । ನೊರೆವ ಸದ್ಬೋಧೆಯಿಂ ।
ಪರಮೈಕ್ಯ ತಾನೆ ಕಂಗೊಳಿಸುತಿಹುದು ॥ ೧೨೪ ॥

೧೨೪. ಮರಹಿನಿಂದ - ಅಜ್ಞಾನದಿಂದ ; ಉಪಾಧಿನೆರೆಯಾಗಿ-ಉಪಾಧಿಯು ತೋರುವದರಿಂದ ; ಕಂಗೊಳಿಸು- ಸಾಕ್ಷಾತ್ಕಾರವಾಗು.

ಅಜ್ಞಾನದಿಂದ ಎರಡುಉಪಾಧಿಗಳು ಆಗಿರುವವು. ಮಲಿನವಾದ ಉಪಾಧಿಯಿಂದ ಜೀವನೂ ಶುದ್ಧವಾದ ಉಪಾಧಿಯಿಂದ ಈಶ್ವರನೂ ತೋರುವದು ; ಆದರೆ ಉಪಾಧಿಗಳು ಕಲ್ಪಿತವಾಗಿರುವದರಿಂದ ಜೀವೇಶ್ವರ ಭೇದವೂ ಕಲ್ಪಿತವೇ. ಚೈತನ್ಯರೂಪವಾದ ಪರಮಾತ್ಮತತ್ತ್ವವೊಂದೇ ಸತ್ಯವು-ಹೀಗೆಂಬುದು ಗುರುಬೋಧೆಯಿಂದ ಗೊತ್ತಾಗುತ್ತದೆ. ಆ ಗುರುವೂ ನಿಜವಾಗಿ ಪರಮಾತ್ಮನೇ.

ನೀರು ನೀರಿಗೆ ಪೋಗಿ । ಸೇರುತಿಹ ಪರಿಯಲ್ಲಿ ।
ನೂರಾರು ಜೀವರೀ ಪರಮನಲ್ಲಿ ॥
ಚಾರು ಗುರುವಚನದಿಂ । ಮೀರಿ ಮಾಯೆಯನೆಲ್ಲ ।
ಸೂರೆಗೊಂಬರು ನಿತ್ಯಕೈವಲ್ಯವ ॥ ೧೨೫ ॥

೧೨೫. ನೀರು ನೀರಿನಲ್ಲಿ ಸೇರಿದಾಗ ಭೇದವಿಲ್ಲದಿರುವಂತೆ ಮುಕ್ತರಿಗೂ ಪರಮಾತ್ಮನಿಗೂ ಭೇದವಿರುವದಿಲ್ಲ. ನಿತ್ಯಕೈವಲ್ಯ- ಯಾವಾಗಲೂ

ಸಿದ್ಧವಾಗಿಯೇ ಇರುವ ಮುಕ್ತಿ ; ಜ್ಞಾನದಿಂದ ತಾನು ಯಾವಾಗಲೂ ಮುಕ್ತನಾಗಿಯೇ ಇದ್ದೆನೆಂದು ತಿಳಿಯುವದು

ಪ್ರೇಮಪಾಶವಿದೊಂದೆ । ಕಾಮಹರಚರಣಸ ।
ತ್ತಾಮರಸಯುಗವನಿರ್ಕುಳಿಗೊಳ್ವದು ॥
ಆ ಮಹಾಶಂಕರನು । ಕಾಮಿತಾರ್ಥವ ನೀವ ।
ನೇಮವಿದು ಗುರುಶಂಕರಾರ್ಯಮತದಿ ॥ ೧೨೬ ॥

೧೨೬. ಚರಣಸತ್ತಾಮರಸ-ಪಾದವೆಂಬ ಒಳ್ಳೆಯ ಕಮಲ ; ಇರ್ಕುಳಿಗೊಳ್ವುದು- ಎಳೆದುಕೊಳ್ಳುವದು.

ಭಕ್ತಿಯಿಂದ ಪರಮಾತ್ಮನು ವಶನಾಗುವನು. ಪರಮಾತ್ಮಪ್ರೇಮವೇ ಪರಮಪುರುಷಾರ್ಥಕ್ಕೆ ಹೇತುವಾದದ್ದು

ಮಂಗಲವು ಶಂಕರಗೆ। ಮಂಗಲವು ಪುರಹರಗೆ ।
ಮಂಗಲವು ಸಂಸೃತಿಭಯಂಕರನಿಗೆ ॥
ಮಂಗಲ ಗಿರೀಶನಿಗೆ । ಮಂಗಲ ಮಹೇಶನಿಗೆ ।
ಮಂಗಲವು ಸರ್ವಮಂಗಲೆಯರಸಗೆ ॥ ೧೨೭ ॥

೧೨೭. ಪುರಹರಗೆ - ತ್ರಿಪುರವನ್ನು ಸಂಹಾರಮಾಡಿದ ಈಶ್ವರನಿಗೆ ; ಸಂಸೃತಿ - ಸಂಸಾರ ; ಸರ್ವಮಂಗಲೆ- ಪಾರ್ವತಿ.

ಮಂಗಲವು ಶಂಕರಗೆ । ಮಂಗಲವು ಯತಿವರಗೆ ।
ಮಂಗಲವು ನಿತ್ಯವಭಯಂಕರನಿಗೆ ॥
ಮಂಗಲವಮೇಯನಿಗೆ । ಮಂಗಲವಮಾಯನಿಗೆ ।
ಮಂಗಲವು ಮಂಗಲವು ಗುರುರಾಯಗೆ ॥ ೧೨೮ ॥

೧೨೮. ಅಮೇಯ - ಪ್ರಮಾಣಗಳನ್ನು ಮೀರಿರುವವನು ; ಅಮಾಯ - ಶುದ್ಧನಾಗಿರುವವನು.

# ಅಧ್ಯಾತ್ಮಪ್ರೇಮಿಗಳಿಗೆ ಉಪಯುಕ್ತವಾದ ಸ್ತೋತ್ರಗಳು

1. **ಭಗವಚ್ಛರಣಸ್ತೋತ್ರ :** [illegible]

(ನಾಲ್ಕನೆಯ ಮುದ್ರಣ : ೧೯೮೮ ಪುಟಗಳು ಕ್ರೌನ್. ೪+೬೦)

2. **ಮುಕುಂದಮಾಲಾ :** [illegible]

(ಐದನೆಯ ಮುದ್ರಣ : ೧೯೯೧ ಪು. ಕ್ರೌನ್. ೪+೨೦)

3. **ವೇದಾಂತಬಾಲಬೋಧೆ :** [illegible] ಪ್ರಾತಃಸ್ಮರಣಸ್ತೋತ್ರಕ್ಕೆ [illegible]

(ನಾಲ್ಕನೆಯ ಮುದ್ರಣ : ೧೯೯೨ ಪು. ಕ್ರೌನ್. ೬ +೪೨)

4. **ಮೂಲರಾಮಾಯಣ :** ಶ್ರೀಮದ್ವಾಲ್ಮೀಕಿರಾಮಾಯಣದ ಬಾಲಕಾಂಡದ ಮೊದಲನೆಯ ಸರ್ಗವನ್ನು ಮೂಲ, ಕನ್ನಡ ಅನುವಾದ ಸಮೇತ ಕೊಡಲಾಗಿದೆ. ರಾಮಾಯಣದ ಪೂರ್ಣಕಥೆಯು ಸಂಕ್ಷೇಪವಾಗಿದೆ.

(ನಾಲ್ಕನೆಯ ಮುದ್ರಣ : ೧೯೯೯ ಪು. ಕ್ರೌನ್. ೪ +೨೨)

5. **ಶ್ರೀರಾಮಗೀತೆ :** ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದು. ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘವಾದ ಉಪದೇಶವು ಇದರಲ್ಲಿದೆ. ಇದರಲ್ಲಿ ಮಹಾವಾಕ್ಯವಿಚಾರವೂ, ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನಕ್ರಮವೂ - ಉಕ್ತವಾಗಿದೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದೂ ಪ್ರತಿಪಾದಿಸಿದೆ.

(ಮೂರನೆಯ ಮುದ್ರಣ : ೧೯೯೯ ಪು. ಕ್ರೌನ್. ೬ +೩೪)

6. **ಗಣೇಶಾಷ್ಟಕ :** ಗಣೇಶಪುರಾಣದಿಂದ ಆರಿಸಿದ ಸ್ತೋತ್ರ, ಪ್ರಪಂಚವೆಲ್ಲವೂ ಬ್ರಹ್ಮವೇ ಎಂಬ ಸಿದ್ಧಾಂತವನ್ನು ಮನೋಹರ ರೀತಿಯಿಂದ ವಿವರಿಸಿರುವ ಈ ಸ್ತೋತ್ರಕ್ಕೆ ತಿಳಿಗನ್ನಡದ ಭಾವಾರ್ಥವನ್ನೂ ವಿವರಣೆಯನ್ನೂ ಜೋಡಿಸಿದೆ.

(ಮೂರನೆಯ ಮುದ್ರಣ : ೧೯೯೮ ಪು. ಕ್ರೌನ್. ೪ +೨೫)

# ಸಂಸ್ಥಾಪಕರ ಸ್ಮರಣೆ

ಕರ್ನಾಟಕದೇಶದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು** ಶಾಂಕರವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಟೀಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯಗಳು, ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5. 1. 1880ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು **ವೈ ಸುಬ್ಬರಾವ್** ಎಂದಿತ್ತು. 1948ರವರೆಗೆ (68ನೆಯ ವಯಸ್ಸಿನವರೆಗೆ) ಅವರು ''ಸುಬ್ರಾಯ'' ರೆಂದೇ ಪ್ರಖ್ಯಾತರಾಗಿದ್ದರು. 10. 6. 1948ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.**

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **ಪುರುಷಸರಸ್ವತಿ** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ **ಅಧ್ಯಾತ್ಮಪ್ರಕಾಶಕಾರ್ಯಾಲಯವು** ದೇಶ ವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880- 1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ.

**ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।**
**ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥**

**''ಓಂ ನಮೋ ಭಗವತೇ ಸಚ್ಚಿದಾನಂದಾಯ''**